بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

**ವರ್ಷ:** 05

**ಸಂಚಿಕೆ:** 27

**ವಾರ್ಷಿಕ ಶುಲ್ಕ ರೂ.600/-**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**04 ಜುಲೈ 2024, 04 ವಫಾ 1403 ಹಿಜರಿ ಶಮ್ಸಿ, 27 ಝುಲ್-ಹಜ್ಜ 1445 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِذَا صُرِفَتْ اَبْصَارُهُمْ تِلْقَآءَ اَصْحٰبِ النَّارِ قَالُوْا رَبَّنَا لَا تَجْعَلْنَا مَعَ الْقَوْمِ الظّٰلِمِيْنَ

**(ಅಲ್ ಅಅ್‌ರಾಫ್ : 48)**

**ಅಂದರೆ: ಅವರ (ಸ್ವರ್ಗಾರ್ಹರ) ಕಣ್ಣುಗಳು ನರಕವಾಸಿಗಳ ಮೇಲೆ ಬೀಳುವಾಗ, 'ನಮ್ಮ ಪ್ರಭೂ, ನೀನು ನಮ್ಮನ್ನು ಅಧರ್ಮಿಗಳಾದ ಜನರೊಂದಿಗೆ ಸೇರಿಸಬೇಡ ಎಂದು ಅವರು ಹೇಳುವರು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮಾರಾಟಗಾರ ಮತ್ತು ಖರೀದಿದಾರರು ಸತ್ಯವನ್ನು ಹೇಳಿದರೆ ಅವರ ಖರೀದಿ ಮತ್ತು ಮಾರಾಟದಲ್ಲಿ ಅನುಗ್ರಹವು ಇರುತ್ತದೆ

(2079) ಹಝ್ರತ್ ಹಕೀಮ್ ಬಿನ್ ಹಿಝಾಮ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್(ಸ)ರವರು ನುಡಿಯುತ್ತಾರೆ: ಮಾರಾಟಗಾರ ಮತ್ತು ಕೊಳ್ಳುವವರಿಬ್ಬರಿಗೂ ಅವರು ಬೇರ್ಪಡುವವರೆಗೆ (ಮಾರಾಟವನ್ನು ರದ್ದುಗೊಳಿಸುವ) ಅಧಿಕಾರವನ್ನು ಹೊಂದಿರುತ್ತಾರೆ ಅಥವಾ ಅವರು ಪ್ರತ್ಯೇಕಗೊಳ್ಳುವವರೆಗೆ ಎಂದು ಹೇಳಿದರು. ಅವರಿಬ್ಬರೂ ಸತ್ಯವಾಗಿ ವರ್ತಿಸಿದರೆ ಮತ್ತು ಪ್ರಾಮಾಣಿಕವಾಗಿ ಮಾತನಾಡಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದಲ್ಲಿ ಇಬ್ಬರೂ ಧನ್ಯರಾಗುತ್ತಾರೆ ಮತ್ತು ಇಬ್ಬರೂ ಮುಚ್ಚಿಟ್ಟು ಸುಳ್ಳು ಹೇಳಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದ ಅನುಗ್ರಹವು ಅಳಿಸಿಹೋಗುತ್ತದೆ.

### ಯಾರಾದರೂ ಆಹ್ವಾನಿಸದ ಅತಿಥಿಗಳೊಂದಿಗೆ ಬಂದರೆ

(2081) ಹಝ್ರತ್ ಅಬು ಮಸೂದ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳಿದರು: ಓರ್ವ ಅನ್ಸಾರಿ ವ್ಯಕ್ತಿ ಬಂದರು, ಅವರ ಉಪನಾಮ ಅಬು ಶುಈಬ್ ಎಂದಿತ್ತು, ಅವನು ಕಟುಕನಾಗಿದ್ದ ತನ್ನ ಹುಡುಗರಲ್ಲಿ ಒಬ್ಬನನ್ನು ನನಗೆ ಐದು ಜನರಿಗೆ ಸಾಕಾಗುವಷ್ಟು ಆಹಾರವನ್ನು ತಯಾರಿಸಲು ಹೇಳಿದರು, ಏಕೆಂದರೆ ನಾನು ಪ್ರವಾದಿ(ಸ) ಅವರಿಗೆ ಅಹ್ವಾನಿಸಲು ಬಯಸುತ್ತೇನೆ..... ನನಗೆ ಅವರ(ಸ) ಮುಖದಲ್ಲಿ ಹಸಿವು ಕಂಡುಬಂದಿತು. ಹೀಗಾಗಿ ಅವರು ಆ ಎಲ್ಲಾ ಜನರನ್ನು ಅಹ್ವಾನಿಸಿದಾಗ ಅವರೊಂದಿಗೆ ಇನ್ನೋರ್ವ ವ್ಯಕ್ತಿಯೂ ಆಗಮಿಸಿದನು. ಅದಕ್ಕೆ ಪ್ರವಾದಿ(ಸ) ನುಡಿದರು ಇವನು ನಮ್ಮೊಂದಿಗೆ ಆಗಮಮಿಸಿದ್ದಾನೆ, ನೀವು ಬಯಸಿದರೆ ಅವನಿಗೆ ಅನುಮತಿಸಬಹುದು ಇಲ್ಲದಿದ್ದರೆ ನೀವು ಹಿಂತಿರುಗಲು ಸಿಳಿಸಿದರೆ, ಅವನು ಹಿಂತಿರುಗುತ್ತಾನೆ. ಅವರು ಇಲ್ಲ ನಾನು ಅವರಿಗೆ ಬರುವುದಕ್ಕೆ ಅನುಮತಿ ನೀಡುತ್ತೇನೆ ಎಂದು ಹೇಳಿದರು. **(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

## ಆತ್ಮದ ಆನಂದ ಯಾವುದರಲ್ಲಿದೆ ಎಂದು ಜಗತ್ತಿಗೆ ತಿಳಿದಿದ್ದರೆ ಅದು ಪವಿತ್ರ ಖುರ್‌ಆನ್‌ನಲ್ಲಿ ಮಾತ್ರ ಇದೆ ಎಂದರು ತಿಳಿಯುತ್ತಿತ್ತು.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಾನು ನೋಡುವುದೇನೆಂದರೆ ಪ್ರಪಂಚದ ಗಮನವು ಈಗ ಭೂ ವಿಜ್ಞಾನಗಳ ಮೇಲೆ ಹೆಚ್ಚು ಬಾಗಿದೆ ಮತ್ತು ಪಾಶ್ಚಾತ್ಯ ಜ್ಞಾನೋದಯವು ತನ್ನ ಹೊಸ ಆವಿಷ್ಕಾರಗಳು ಮತ್ತು ಉದ್ಯಮಗಳಿಂದ ಜಗತ್ತನ್ನು ಬೆರಗುಗೊಳಿಸಿದೆ. ಮುಸಲ್ಮಾನರು ತಮ್ಮ ಶ್ರೇಯೋಭಿವೃದ್ಧಿಗೆ ಉಪಾಯವನ್ನು ಆಲೋಚಿಸಿದರೂ ದುರದೃಷ್ಟವಶಾತ್ ಪಾಶ್ಚಾತ್ಯರನ್ನೇ ಇಮಾಮ್‌ಗಳನ್ನಾಗಿ ಮಾಡಿಕೊಂಡು ಯೂರೋಪಿನ ಅನುಕರಣೆಯನ್ನು ಹಿಂಬಾಲಿಸಿ ಹೆಮ್ಮೆ ಪಡಬೇಕು ಎಂದೆನಿಸಿಕೊಂಡರು. ಇದು ಹೊಸ ಬೆಳಕಿನ ಮುಸಲ್ಮಾನರ ಪರಿಸ್ಥಿತಿಯಾಗಿದೆ, ಹಳೆಯ ಶೈಲಿಯ ಮುಸ್ಲಿಮರು ಎಂದೆನಿಕೊಳ್ಳುವವರು ತಮ್ಮನ್ನು ತಾವು ಧರ್ಮದ ಬೆಂಬಲಿಗರು ಎಂದು ಪರಿಗಣಿಸುತ್ತಾರೆ, ಅವರ ಸಂಪೂರ್ಣ ಜೀವನದ ಸಾರಾಂಶವೆಂದರೆ ಅವರು ಅರಬಿಯ ವ್ಯಾಕರಣ (ಸರ್ಫ್ ವ ನಹು) ಮತ್ತು ಉಚ್ಚಾರಣೆಯ ವಿವಾದಗಳಲ್ಲಿ ಮಾತ್ರ ಸಿಲುಕಿಕೊಂಡಿದ್ದಾರೆ. ಅವರು ಪವಿತ್ರ ಖುರ್‌ಆನ್ ಕಡೆ ಗಮನ ಕೊಡುವುದಿಲ್ಲ ಮತ್ತು ಅದನ್ನು ಏಕೆ ನಿರಾಕರಿಸುತ್ತಾರೆ ಎಂದರೆ ಅವರು ಸ್ವಯಂ ಶುದ್ಧೀಕರಣಕ್ಕೆ ಗಮನ ಕೊಡುವುದಿಲ್ಲ.

ಹೌದು, ಆತ್ಮಶುದ್ಧಿ ಎಂದು ಹೇಳಿಕೊಳ್ಳುವ ಗುಂಪು ಇದ್ದರೆ ಅದು ಸೂಫಿಗಳು ಮತ್ತು ಸಜ್ಜಾದ ನಶೀನ್ (ಪೀಠಾದಿಪತಿಗಳು) ಅವರ ಗುಂಪಾಗಿದೆ, ಆದರೆ ಈ ಜನರು ಪವಿತ್ರ ಖುರ್‌ಆನ್ ಅನ್ನು ತ್ಯಜಿಸಿ ತಮ್ಮದೇ ಆದ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಯಾರೋ ಚಿಲ್ಲ ಕಶೀ ಮಾಡುತ್ತಾರೆ, ಯಾರೋ ಅಲ್ಲಾಹನ ಘೋಷಣೆಗಳನ್ನು ಕೂಗುತ್ತಾರೆ, ಯಾರೋ ನಕಾರಾತ್ಮಕ ದೃಢೀಕರಣಗಳು, ಗಮನ, ಮಾಟ ಮಂತ್ರಗಳ ಸೆರೆವಾಸ ಇತ್ಯಾದಿಗಳಲ್ಲಿ ಸಿಲುಕಿ ಬಳಲುತ್ತಿದ್ದಾರೆ. ಹೀಗೆ ಪ್ರವಾದಿ ಮುಹಮ್ಮದ್(ಸ) ರವರಿಂದ ಸಾಬೀತುಪಡಿಸದ ವಿಧಾನಗಳನ್ನು ಅನುಸರಿಸುತ್ತಾರೆ. ಇದು ಪವಿತ್ರ ಖುರ್‌ಆನ್‌ನ ಮೂಲವಲ್ಲ ಮತ್ತು ಅಂತಹ ವಿಧಾನಗಳನ್ನು ಪ್ರವಾದಿ(ಸ) ರವರು ಎಂದಿಗೂ ಇಷ್ಟಪಡಲಿಲ್ಲ. ಹೀಗಾಗಿ ನೆನಪಿಡಬೇಕಾದ ವಿಷಯವೇನೆಂದರೆ ಎಲ್ಲಿಯ ತನಕ ಓರ್ವ ವ್ಯಕ್ತಿಯು ಶುದ್ಧವಾದ ಬದಲಾವಣೆಯನ್ನು ತನ್ನಲ್ಲಿ ಮಾಡುವುದಿಲ್ಲವೋ ಮತ್ತು ಆತ್ಮವನ್ನು ಶುದ್ಧೀಕರಿಸುವುದಿಲ್ಲವೋ, ಪವಿತ್ರ ಖುರ್‌ಆನ್‌ನ ಬೋಧನೆಗಳು ಮತ್ತು ಸದ್ಗುಣಗಳ ಬಗ್ಗೆ ಅವನಿಗೆ ಯಾವುದೇ ಮಾಹಿತಿ ಇರುವುದಿಲ್ಲವೋ, ಪವಿತ್ರ ಖುರ್‌ಆನ್‌ನಲ್ಲಿ ಆತ್ಮದ ಬಾಯಾರಿಕೆಯನ್ನು ತಣಿಸುವ ಅಂಶಗಳು ಮತ್ತು ಸತ್ಯಗಳಿವೆ.

ಆತ್ಮದ ಆನಂದ ಯಾವುದರಲ್ಲಿದೆ ಎಂದು ಜಗತ್ತಿಗೆ ತಿಳಿದಿದ್ದರೆ ಅದು ಪವಿತ್ರ ಖುರ್‌ಆನ್‌ನಲ್ಲಿ ಮಾತ್ರ ಇದೆ ಎಂದು ಅವರು ತಿಳಿಯುತ್ತಿದ್ದರು.

**(ಮಲ್‌ಫೂಝಾತ್, ಸಂಪುಟ-1, ಪುಟ-385, ಮುದ್ರಿತ ಖಾದಿಯಾನ್ 2018)**

ಎಲ್ಲಾ ಮಾನವ ಆತ್ಮಗಳು, ಅವರ ದೇಹಗಳು ಜಗತ್ತಿನಲ್ಲಿ ವಾಸಿಸುತ್ತಿದ್ದವೇ ಎಂಬುದನ್ನು ಲೆಕ್ಕಿಸದೆ, ಒಟ್ಟುಗೂಡಿಸಲಾಗುತ್ತದೆ ಮತ್ತು ಪ್ರತಿಯೊಂದು ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರು ತನ್ನ ಜನಾಂಗದ ಬಗ್ಗೆ ಸಾಕ್ಷಿ ಹೇಳುತ್ತಾರೆ. ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಎಬ್ಬಿಸಲಾಗುವುದು ಎಂದು ಅವರು ಹೇಳಿದರು
ನನ್ನ ಪ್ರಕಾರ, ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆ, ಅವರು ತಮ್ಮ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಅಲ್-ನಹ್ಲ್ ಆಯತ್ 85 **ವಯೌಮ ನಬ್‌ಅಸು ಮಿನ್ ಕುಲ್ಲಿ ಉಮ್ಮತಿನ್ ಶಹೀದನ್ ಸುಮ್ಮ ಲಾ ಯುಅ್‌ಝನು ಲಿಲ್ಲಝೀನ ಕಫರೂ ವಲಾಹುಮ್ ಯುಸ್‌ತಅ್‌ತಬೂನ** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

**ತಫ್ಸೀರ್:** ಈ ದೊಡ್ಡ ಅಪರಾಧವನ್ನು ಪ್ರಸ್ತಾಪಿಸಿದ ನಂತರ, ಅವರು ಮರಣಾನಂತರದ ಜೀವನವನ್ನು ಉಲ್ಲೇಖಿಸಿದರು, ಈ ಜಗತ್ತಿನಲ್ಲಿ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಖುಬೈಬ್(ರ) ರವರು ಮೊದಲ ಸಹಾಬಿಯಾಗಿದ್ದರು ಅವರನ್ನು ಶಿಲುಬೆಗೇರಿಸಿ ಶಹೀದ್ ಮಾಡಲಾಯಿತು.

ವಧಿಸಲ್ಪಡುವ ಮೊದಲು ಎರಡು ರಕತ್‌ಗಳನ್ನು ನಮಾಝ್ ನಿರ್ವಹಿಸುವ ಸುನ್ನತ್ ಅನ್ನು ಮೊದಲು ಸ್ಥಾಪಿಸಿದವರು ಹಝ್ರತ್ ಖುಬೈಬ್(ರ) ಆಗಿದ್ದರು.

ಹಝ್ರತ್ ಖುಬೈಬ್(ರ) ಶಹೀದರಾಗುವ ಸಂದರ್ಭದಲ್ಲಿ ಹೀಗೆ ಪ್ರಾರ್ಥಿಸಿದ್ದರು: **ಅಲ್ಲಾಹುಮ್ಮ ಅಹ್‌ಸಿಹಿಮ್ ಅದದಾ ವಖ್ತುಲ್‌ಹುಮ್ ಬದದಾ–** ಹೇ ದೇವಾ, ಈ ದೌರ್ಜನ್ಯಗಾರರನ್ನೆಲ್ಲ ನಾಶಗೊಳಿಸು.

ಇವರು ಅಲ್ಲಾಹನನ್ನು ಪ್ರೀತಿಸಿದ ಮತ್ತು ಅಲ್ಲಾಹನಿಗಾಗಿ ತ್ಯಾಗ ಮಾಡಿದ ಜನರಾಗಿದ್ದಾರೆ, ಮತ್ತು ಸರ್ವಶಕ್ತನಾದ ಅಲ್ಲಾಹನು ಸಹ ಅವರನ್ನೂ ಗೌರವಿಸಿದನು ಮತ್ತು ಅವರ ಮರಣದ ನಂತರವೂ ಅವರ ಮೃತಶರೀರಗಳನ್ನು ಸಂರಕ್ಷಿಸಿದನು.

**ಹಝ್ರತ್ ಖುಬೈಬ್(ರ) ಅವರ ಶಹಾದತ್‌ನ ಘಟನೆಯ ವಿಶ್ವಾಸವರ್ಧಕ ಪ್ರಸ್ತಾವನೆ ಮತ್ತು ಫಲಸ್ತೀನ್, ಸೂಡಾನ್ ಹಾಗೂ ಯೆಮನ್ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಲು ಕೋರಿಕೆ**

ಇತ್ತೀಚಿಕೆ ನಿಧನ ಹೊಂದಿದ ಇಬ್ಬರು ದಿವಂಗತರಾದ ಮಾನ್ಯ ಚೌಧರಿ ಮುನೀರ್ ಅಹ್ಮದ್ ಸಾಹಿಬ್ (ಮುರಬ್ಬಿ ಸಿಲ್‌ಸಿಲಾ ಅಮೇರಿಕಾ) ಮತ್ತು ಮಾನ್ಯ ಅಬ್ದುರ್ರಹ್‌ಮಾನ್ ಕುಟ್ಟಿ ಸಾಹಿಬ್, ಅಲನಲ್ಲೂರು, ಕೇರಳ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **‘ಮಸ್ಜಿದ್ ಮುಬಾರಕ್’** ನಿಂದ **31–05–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಒಂದು ಯುದ್ಧದಲ್ಲಿ ಹಝ್ರತ್ ಖುಬೈಬ್(ರ) ಶಹೀದರಾದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಅದಕ್ಕೆ ಸಂಬಂಧಿಸಿ ಹೆಚ್ಚುವರಿ ಮಾಹಿತಿ ನೀಡುತ್ತಾ ಹೀಗೆ ಬರೆಯಲಾಗಿದೆ. ಹಝ್ರತ್ ಖುಬೈಬ್(ರ)ರನ್ನು ಶಿಲುಬೆಗೇರಿಸಿ ಶಹೀದರನ್ನಾಗಿ ಮಾಡಲಾಗಿತ್ತು. ಅಲ್ಲಾಮಾ ಅಸೀರ್ ಜಝ್ರಿ ಬರೆಯುತ್ತಾರೆ: ಅಲ್ಲಾಹನ ಮಾರ್ಗದಲ್ಲಿ ಆ ರೀತಿ ಕೊಲ್ಲಲ್ಪಟ್ಟ ಪ್ರಥಮ ಶಹೀದ್ ಹಝ್ರತ್ ಖುಬೈರ್(ರ) ಆಗಿದ್ದರು.
(ಅಸದುಲ್‌ಗ್ಹಾಬ, ಸಂಪುಟ–2, ಪುಟ–156, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಒಂದು ವರದಿಯಲ್ಲಿ ಹೀಗಿದೆ: ಆ ಸಂದರ್ಭದಲ್ಲಿ ಖುರೈಶಿಗಳು ಹಝ್ರತ್ ಖುಬೈಬ್(ರ)ರೊಂದಿಗೆ, ಅವರು ಇಸ್ಲಾಮ್ ಧರ್ಮವನ್ನು ತ್ಯಜಿಸುವುದಾದರೆ ಅವರನ್ನು ಬಂಧಮುಕ್ತರನ್ನಾಗಿ ಮಾಡಲಾಗುವುದು ಎಂದು ಹೇಳಿದ್ದರು. ಹಝ್ರತ್ ಖುಬೈಬ್(ರ) ಆಗ ಹೇಳಿದರು: ಇಸ್ಲಾಮ್ ಧರ್ಮದ ಮಾರ್ಗದಲ್ಲಿ ನಾನು ಕೊಲ್ಲಲ್ಪಟ್ಟು ಶಹೀದನಾಗುವುದು ಒಂದು ಸಾಮಾನ್ಯ ವಿಷಯವಾಗಿದೆ. ಶಹೀದರಾಗುವ ಮೊದಲು ಅವರು ಅಲ್ಲಾಹನೊಂದಿಗೆ ಹೀಗೆ ಪ್ರಾರ್ಥಿಸಿದರು: ಹೇ ಅಲ್ಲಾಹ್, ನನ್ನ ಸಲಾಮನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಲಪಿಸಲು ಮತ್ತು ನಮಗೆ ಸಂಭವಿಸಿರುವುದನ್ನು ತಿಳಿಸಲು ಇಲ್ಲಿ ಯಾರೂ ಇಲ್ಲ. ನನ್ನ ಸಲಾಮನ್ನು ನೀನು ಸ್ವತಃ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಲಪಿಸು. ನಮಗೆ ಸಂಭವಿಸಿದ್ದನ್ನು ಅವರಿಗೆ ತಿಳಿಸಿಕೊಡು.
(ಸೀರತ್ ಹಲಬೀಯಾ, ಸಂಪುಟ–3, ಪುಟ–235, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಉಸಾಮ ಬಿನ್ ಝೈದ್ ಹೀಗೆ ವರದಿ ಮಾಡುತ್ತಾರೆ: ಒಂದು ದಿವಸ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಜೊತೆಗೆ ಕುಳಿತಿದ್ದರು. ಆಗ ಅವರಿಗೆ ಸಂದೇಶವಾಣಿ ಅವತೀರ್ಣವಾಗಲು ತೊಡಗಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: **ವ ಅಲೈಹಿಸ್ಸಲಾಮು ವ ರಹ್ಮತುಲ್ಲಾಹಿ ವ ಬರಕಾತುಹೂ** ಅವರ ಮೇಲೆ ಶಾಂತಿ ಮತ್ತು ಅನುಗ್ರಹಗಳು ಸುರಿಯಲ್ಪಡಲಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂದೇಶವಾಣಿ ಅವತೀರ್ಣವಾಗುವ ಸ್ಥಿತಿ ಕೊನೆಗೊಂಡಾಗ ಅವರು ಹೇಳಿದರು: ಜಿಬ್ರಾಈಲ್ ನನಗೆ ಖುಬೈಬರ ಸಲಾಮ್ ತಲಪಿಸಿದ್ದಾರೆ. ಖುಬೈಬ್‌ರನ್ನು ಖುರೈಶಿಗಳು ಹತ್ಯೆ ಮಾಡಿದ್ದಾರೆ.

ಒಂದು ಹದೀಸು ವರದಿ ಹೀಗಿದೆ: ಹಝ್ರತ್ ಖುಬೈಬ್(ರ)ರನ್ನು ಹತ್ಯೆ ಮಾಡುವ ಸಂದರ್ಭದಲ್ಲಿ ಖುರೈಶಿಗಳು ನಲ್ವತ್ತು ಜನರನ್ನು ಕರೆಯಿಸಿಕೊಂಡರು. ಆ ಜನರ ತಂದೆ ತಾತಂದಿರು ಬದರ್ ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದರು. ಆ ನಲ್ವತ್ತು ಜನರಲ್ಲಿ ಪ್ರತಿಯೊಬ್ಬರಿಗೆ ಒಂದೊಂದು ಈಟಿ ಕೊಟ್ಟು ಖುರೈಶಿಗಳು ಹೀಗೆ ಹೇಳಿದರು: ಈತ ನಿಮ್ಮ ತಂದೆ, ತಾತಂದಿರನ್ನು ಹತ್ಯೆ ಮಾಡಿದವನಾಗಿದ್ದಾನೆ. (ಸೀರತ್ ಹಲಬೀಯಾ, ಸಂಪುಟ–3, ಪುಟ–236, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಆ ಜನರು ತಮ್ಮ ಈಟಿಗಳಿಂದ ಹಝ್ರತ್ ಖುಬೈಬ್(ರ)ರನ್ನು ಚುಚ್ಚಲು ತೊಡಗಿದರು. ಅವರು ಹಗುರವಾಗಿ ಚುಚ್ಚುತ್ತಿದ್ದರು. ಹಝ್ರತ್ ಖುಬೈಬ್(ರ) ಶಿಲುಬೆಯಲ್ಲಿ ಹೊರಳಾಡಿದಾಗ ಅವರ ಮುಖ ಕಅಬವನ್ನು ಅಭಿಮುಖೀಕರಿಸಿತು. ಆಗ ಅವರು ಹೇಳಿದರು: ಎಲ್ಲ ಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು. ಅವನು ನನ್ನ ಮುಖವನ್ನು ಖಿಬ್ಲದ ಕಡೆಗೆ ತಿರುಗಿಸಿರುವನು. ಅದು ಅವನಿಗೆ ಇಷ್ಟಕರವಾದ ಖಿಬ್ಲ ಆಗಿದೆ. ಅನಂತರ ಬಹುದೇವಾರಾಧಕರು ಹಝ್ರತ್ ಖುಬೈಬ್(ರ)ರನ್ನು ಹತ್ಯೆ ಮಾಡಿದರು.
(ಸಬ್ಲುಲ್ ಹುದಾ, ಸಂಪುಟ–6, ಪುಟ–44, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಬಹುದೇವಾರಾಧಕರು ಹಝ್ರತ್ ಖುಬೈಬ್(ರ)ರನ್ನು ಈಟಿಗಳಿಂದ ಚುಚ್ಚಿ ತೀವ್ರವಾಗಿ ಹಿಂಸೆ ನೀಡಿದ ನಂತರ ಅವರನ್ನು ಹತ್ಯೆ ಮಾಡಿದರು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಬುಖಾರಿಯ ಒಂದು ವರದಿಯಿಂದ ತಿಳಿದುಬರುವುದೇನೆಂದರೆ ಹಝ್ರತ್ ಖುಬೈಬ್(ರ) ತಮ್ಮ ಕವನದ ಸಾಲುಗಳನ್ನು ಮುಗಿಸಿದಾಗ ಉಖ್ಬಾ ಬಿನ್ ಹಾರಿಸ್ ಅವರ ಬಳಿ ಬಂದು ಹಝ್ರತ್ ಖುಬೈರ್(ರ) ಅವರನ್ನು ವಧಿಸಿದನು. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಹಾಝಿ, ಹದೀಸ್–4086)

ಉಖ್ಬಾ ಬಿನ್ ಹಾರಿಸ್‌ನ ಉಪನಾಮ ಅಬೂಸಿರ್‌ವಅ ಎಂದಾಗಿತ್ತು. ಮತ್ತು ಕೆಲವು ವರದಿಗಳಲ್ಲಿ ಅಬೂಸಿರ್‌ವಅ ಉಖ್ಬಾ ಬಿನ್ ಹಾರಿಸ್ ಆ ಸಂದರ್ಭದಲ್ಲಿ ಚಿಕ್ಕ ಪ್ರಾಯದವನಾಗಿದ್ದನು ಎಂದು ಉಲ್ಲೇಖಿಸಲಾಗಿದೆ. ಆತನ ಕೈಯಲ್ಲಿ ಈಟಿ ನೀಡಲಾಯಿತು ಆದರೆ ಅಬೂ ಮೈಸರಹ್ ಅಬ್ದರಿ ಎಂಬವನು ಹೊಡೆದನು. ಅಂದರೆ ಚಿಕ್ಕ ಹುಡುಗನ ಕೈಯಿಂದ ಸೇಡು ತೀರಿಸಿಕೊಳ್ಳುವುದಾಗಿ ಈಟಿ ನೀಡಲಾಗಿತ್ತು ಆದರೆ ಅದರ ಮೇಲೆ ಬಲಪ್ರಯೋಗ ಬೇರೆಯವನದ್ದಾಗಿತ್ತು. ಕೆಲವು ವಿದ್ವಾಂಸರು ಅಬೂಸಿರ್‌ವಅ ಬೇರೆ ಹೆಸರು ಎಂದು ಪ್ರಾಸ್ತಾಪಿಸಿದ್ದಾರೆ ಮತ್ತು ಉಖ್ಬಾ ಬಿನ್ ಹಾರಿಸ್‌ನನ್ನು ಆತನ ಸಹೋರ ಎಂದು ಹೇಳಿದ್ದಾರೆ. ಅಬೂಮೈಸರಹ್ ಈಟಿಯಿಂದ ಹೊಡೆದಾಗ ಆ ಏಟು ಬೀಳಲಿಲ್ಲ ಆದ್ದರಿಂದ ಅಬೂಸಿರ್‌ವಅ ಮುಂದೆ

ಬಂದು ಈಟಿಯಿಂದ ಹೊಡೆದನು. ನಂತರ ಉಖ್ಬಾ ಬಿನ್ ಹಾರಿಸ್ ಅವರು ಮಕ್ಕಾ ವಿಜಯವಾದಾಗ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿಕೊಂಡಿದ್ದರು ಆಗ ಅವರು ಹೇಳಿದರು: ಆಗ ನಾನು ಇನ್ನು ಚಿಕ್ಕಾ ಪ್ರಾಯದವನಾಗಿದ್ದೆ ಮತ್ತು ಅಬೂಮೈಸರಹ್ ಅಬ್ದರಿ ನನ್ನ ಕೈಯಲ್ಲಿ ಖಡ್ಗ ಅಥವಾ ಈಟಿ ನೀಡಿ ಸ್ವತಃ ನನ್ನ ಕೈ ಮೂಲಕ ಖುಬೈಬ್‌ರನ್ನು ವಧಿಸಿದ್ದರು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-148-149, ಬರ್ಝ್ಮೆ ಇಖ್ಬಾಲ್ ಲಾಹೋರ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಖುರೈಶ್‌ಗಳ ಮುಖಂಡರ ಹೃದಯದಲ್ಲಿ ಹಗೆತನ ಎಷ್ಟಿತ್ತೆಂದರೆ ಅದರೆದುರಿಗೆ ಕಾರುಣ್ಯ ಮತ್ತು ನ್ಯಾಯದ ಭಾವನೆಯೇ ಅಪ್ರಸ್ತುತವಾಗಿತ್ತು. ಬನೂ ಹಾರಿಸ್ ಗೋತ್ರದ ಜನರು ಮತ್ತು ಖುರೈಶಿಗಳ ಇತರ ಮುಖಂಡರು ಖುಬೈಬ್(ರ)ರನ್ನು ಹತ್ಯೆ ಮಾಡಲು ಮತ್ತು ಅದರ ಬಗ್ಗೆ ಸಂಭ್ರಮಿಸಲು ಖುಬೈಬ್‌ರನ್ನು ಒಂದು ಮೈದಾನ ಪ್ರದೇಶಕ್ಕೆ ಕರೆದುಕೊಂಡು ಹೋದರು. ಅವರು ತನ್ನ ಹತ್ಯೆಗೆ ಮೊದಲು ಎರಡು ರಕಅತ್ ನಫ್ಲ್ ನಮಾಝ್ ಅನುಷ್ಠಿಸಲು ಅನುಮತಿಸಬೇಕೆಂದು ಅಪೇಕ್ಷಿಸಿದರು. ಅವರು ಹೃತ್ಪೂರ್ವಕವಾಗಿ ನಮಾಝ್ ಅನುಷ್ಠಿಸಿದರು. ಅವರು ಅನಂತರ ಹೇಳಿದರು:

"ನಾನು ನಮಾಝುನ್ನು ದೀರ್ಘಗೊಳಿಸಲು ಇಚ್ಛಿಸಿದ್ದೆ. ಆದರೆ ಅನಂತರ ನಾನು ಯೋಚಿಸಿದೆ, ನಾನು ಮೃತ್ಯುವನ್ನು ಹಿಂದೆ ಸರಿಸಲು ನಮಾಝುನ್ನು ದೀರ್ಘಗೊಳಿಸುತ್ತಿದ್ದೇನೆ ಎಂದು ನೀವು ಯೋಚಿಸದಿರಲಿ ಎಂದು."

ಅನಂತರ ಅವರು ಈ ಕೆಳಗಿನ ಪದ್ಯ ಹೇಳುತ್ತಾ ಮುಂದೆ ಬಾಗಿದರು.

**ವಮಾ ಅನ್ ಉನಾಲೀ ಹೀನ ಉಖ್ತಲು ಮುಸ್ಲಿಮನ್**
**ಅಲಾ ಅಯ್ಯಿ ಶಿಖ್ಖಿನ್ ಕಾನ ಲಿಲ್ಲಾಹಿ ಮಸ್ರಈ**
**ವಝಾಲಿಕ ಫೀ ಝಾತಿಲ್ಇಲಾಹಿ ವ ಇಂಯ್ಯಶಾಅ**
**ಯುಬಾರಿಕ್ ಅಲಾ ಅವ್‌ಸಾಲಿ ಶಲ್ವಿಮ್ ಮುಮಝ್ಝಿಇ**

ಅಂದರೆ: ನಾನು ಇಸ್ಲಾಮಿನ ಮಾರ್ಗದಲ್ಲಿ ಮತ್ತು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ಕೊಲ್ಲಲ್ಪಡುತ್ತಿದ್ದೇನೆ. ನಾನು ಕೊಲ್ಲಲ್ಪಟ್ಟು ಯಾವ ಪಾರ್ಶ್ವದಲ್ಲಿ ಬೀಳುವೆನು ಎನ್ನುವುದರ ಬಗ್ಗೆ ನನಗೆ ಪರಿವೆ ಇಲ್ಲ. ಇವೆಲ್ಲ ಅಲ್ಲಾಹನಿಗೋಸ್ಕರವಾಗಿವೆ. ನನ್ನ ದೇವನು ಇಚ್ಛಿಸುವುದಾದರೆ ನನ್ನ ಶರೀರದ ಕಣ ಕಣಗಳಲ್ಲೂ ಅನುಗ್ರಹಗಳನ್ನು ಸುರಿಸುವನು. ಬಹುಶಃ ಖುಬೈಬರ ಸಾಲಿಗೆಯ ಮೇಳೆ ಈ ಪದ್ಯವು ಜಾರಿಯಲ್ಲಿತ್ತು ಅಷ್ಟರಲ್ಲಿ ಉಖ್ಬಾ ಬಿನ್ ಹಾರಿಸ್ ಮುಂದೆ ಸಫಾಇ ಅವರನ್ನು ವಧಿಸಿದನು ಹೀಗೆ ಆ ರಸೂಲುಲ್ಲಾಹ್(ಸ)ರ ಪ್ರೇಮಿ ನೆಲದ ಮೇಲೆ ಇದ್ದನು. ಮತ್ತೊಂದು ವರದಿಯಲ್ಲಿ, ಖುರೈಶ್ ಖುಬೈಬ್ ಅವರನ್ನು ಮರದ ಕೊಂಬೆಗೆ ನೇತು ಹಾಕಿದ್ದರು ಮತ್ತು ನಂತರ ಅವರಿಗೆ ಈಟಿಯ ಬಿಂದುಗಳನ್ನು ನೀಡಿ ಕೊಂದರು ಎಂದು ಹೇಳಲಾಗುತ್ತದೆ. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹಮ್ದ್ ಸಾಹಿಬ್ ಎಂ.ಎ(ರ), ಪುಟ-515)

ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಬಗ್ಗೆ ಹೇಳುತ್ತಾರೆ: "ಅವರ ಹತ್ಯೆಯ ಸಮಯ ಬಂದಾಗ, ಖುಬೈಬ್(ರ) ಹೇಳಿದರು: ನಾನು ಎರಡು ರಕತ್ ನಮಾಝ್ ನಿರ್ವಹಿಸುತೇನೆ. ಖುರೈಶ್ ಅವರ ಈ ಮಾತನ್ನು ಒಪ್ಪಿಕೊಂಡರು ಮತ್ತು ಖುಬೈಬ್(ರ) ಅವರು ತಮ್ಮ ದೇವರನ್ನು ಈ ಜಗತ್ತಿನಲ್ಲಿ ಕೊನೆಯ ಬಾರಿಗೆ ಎಲ್ಲರ ಮುಂದೆ ಆರಾಧಿಸಿದರು. ಅವರು ನಮಾಝುನ್ನು ಮುಗಿಸಿ ಹೇಳಿದರು: ನಾನು ನಮಾಝುನ್ನು ದೀರ್ಘಗೊಳಿಸಲು ಇಚ್ಛಿಸಿದ್ದೆ. ಆದರೆ ಅನಂತರ ನಾನು ಯೋಚಿಸಿದೆ, ನಾನು ಮೃತ್ಯುವನ್ನು ಹಿಂದೆ ಸರಿಸಲು ನಮಾಝುನ್ನು ದೀರ್ಘಗೊಳಿಸುತ್ತಿದ್ದೇನೆ ಎಂದು ನೀವು ಯೋಚಿಸದಿರಲಿ ಎಂದು. ತದನಂತರ ಅವರು ಶಾಂತವಾಗಿ ವಧಿಸುವವನ ಮುಂದೆ ತಮ್ಮ ತಲೆಯನ್ನು ಇರಿಸಿ ಹೀಗೆ ಈ ಪದ್ಯವನ್ನು ಹೇಳಿದರು:

**ವಲಸ್ತು ಇಬಾಲೀ ಹೀನ ಉಖ್ತಲು ಮುಸ್ಲಿಮನ್**
**ಅಲಾ ಅಯ್ಯಿ ಜಂಬಿನ್ ಕಾನಲ್ಲಾಹಿ ಮಸ್ರಈ**
**ವಝಾಲಿಕ ಫೀ ಝಾತಿಲ್ಇಲಾಹಿ ವ ಇಂಯಶಾ**
**ಯುಬಾರಿಕು ಅಲಾ ಅವ್‌ಸಾಲಿ ಶಿಲ್‌ವಿ ಮುಮಝ್ಝೀ**

ಅಂದರೆ: ನಾನು ಇಸ್ಲಾಮಿನ ಮಾರ್ಗದಲ್ಲಿ ಮತ್ತು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ಕೊಲ್ಲಲ್ಪಡುತ್ತಿದ್ದೇನೆ. ನಾನು ಕೊಲ್ಲಲ್ಪಟ್ಟು ಯಾವ ಪಾರ್ಶ್ವದಲ್ಲಿ ಬೀಳುವೆನು ಎನ್ನುವುದರ ಬಗ್ಗೆ ನನಗೆ ಪರಿವೆ ಇಲ್ಲ. ಇವೆಲ್ಲ ಅಲ್ಲಾಹನಿಗೋಸ್ಕರವಾಗಿವೆ. ನನ್ನ ದೇವನು ಇಚ್ಛಿಸುವುದಾದರೆ ನನ್ನ ಶರೀರದ ಕಣ ಕಣಗಳಲ್ಲೂ ಅನುಗ್ರಹಗಳನ್ನು ಸುರಿಸುವನು. ಮರಣದಂಡನೆಕಾರನ ಕತ್ತಿಯು ಅವನ ಕುತ್ತಿಗೆಯ ಮೇಲೆ ಬಿದ್ದಾಗ ಮತ್ತು ಅವನ ತಲೆಯು ನೆಲದ ಮೇಲೆ ಬಿದ್ದಾಗ ಖುಬೈಬ್(ರ) ಇನ್ನೂ ತಮ್ಮ ಈ ಕವಿತೆಯನ್ನು ಮುಗಿಸಿರಲಿಲ್ಲ. (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-262)

ಹಝ್ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ: ವಧಿಸಲ್ಪಡುವ ಮೊದಲು ಎರಡು ರಕತ್‌ಗಳನ್ನು ನಮಾಝ್ ನಿರ್ವಹಿಸುವ ಸುನ್ನತ್ ಅನ್ನು ಮೊದಲು ಸ್ಥಾಪಿಸಿದವರು ಹಝ್ರತ್ ಖುಬೈಬ್(ರ) ಆಗಿದ್ದರು. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಮಘಜಿ ಅಧ್ಯಾಯ ಘಜ್ವಾ ಅಲ್-ಅರ್‌ಜೀ... ಹದೀಸ್-4086)

ಹಝ್ರತ್ ಖುಬೈಬ್(ರ) ಅವರ ಪ್ರಾರ್ಥನೆಯು ವಿರೋಧಿಗಳ ಬಗ್ಗೆ ಇತ್ತು ಮತ್ತು ಆ ಪ್ರಾರ್ಥನೆಯ ಪರಿಣಾಮವಾಗಿ ಅವರಿಗೆ ಏನಾಯಿತು?

ಇದರ ಬಗ್ಗೆ ಬುಖಾರಿಯಾ ವ್ಯಾಖ್ಯಾನಗಾರರಾದ ಅಲ್ಲಾಮಾ ಇಬ್ನೆ ಹಜರ್ ಅಸ್ಕಲಾನೀ ಅವರು ಸರಿಯಾ ರಜೀಯ ಅಡಿಯಲ್ಲಿ ಒಂದು ಹದೀಸ್‌ನ ವ್ಯಾಖ್ಯಾನದಲ್ಲಿ ಬರೆಯುತ್ತಾರೆ: ಖುಬೈಬ್(ರ) ಶಹೀದ್ ಆದ ಸಮಯದಲ್ಲಿ ಈ ದುಆವನ್ನು ಮಾಡಿದರು: **ಅಲ್ಲಾಹುಮ್ಮ ಅಹ್‌ಸಿಹಿಮ್ ಅದದಾ-** ಅಂದರೆ ಓ ನನ್ನ ಅಲ್ಲಾಹನೇ!! ಈ ಶತ್ರುಗಳ ಸಂಖ್ಯೆಯನ್ನು ಎಣಿಸಿರು. ಈ ನನ್ನ ಶತ್ರುಗಳೊಂದಿಗೆ ಸೇಡು ತೀರಿಸಿಕೊಳ್ಳಲು ಅವರ ಸಂಖ್ಯೆಯನ್ನು ಎಣಿಸಿಕೊಂಡಿರು ಮತ್ತೊಂದು ವರದಿಯಲ್ಲಿ **ವಖ್ತುಲ್‌ಹುಮ್ ಬದದಾ ವಲಾ ತುಬ್‌ಖಿ ಮಿನ್‌ಹುಮ್ ಅಹದಾ-** ಎಂದು ಈ ಪದಗಳನ್ನು ಸೇರಿಸಲಾಗುತ್ತದೆ. ಅದರೆ ಅವರನ್ನು ಒಂದೊಂದಾಗಿ ಕೊಂದುಹಾಕು ಮತ್ತು ಅವರಲ್ಲಿ ಒಬ್ಬರನ್ನು ಸಹ ಬಿಡಬೇಡ.

ಹಝ್ರತ್ ಖುಬೈಬ್(ರ) ಶಹೀದರಾಗುವ ಸಂದರ್ಭದಲ್ಲಿ ಹೀಗೆ ಪ್ರಾರ್ಥಿಸಿದ್ದರು: **ಅಲ್ಲಾಹುಮ್ಮ ಅಹ್‌ಸಿಹಿಮ್ ಅದದಾ ವಖ್ತುಲ್‌ಹುಮ್ ಬದದಾ-** ಹೇ ದೇವಾ, ಈ ದೌರ್ಜನ್ಯಗಾರರನ್ನೆಲ್ಲ ನಾಶಗೊಳಿಸು. ಹೀಗೆ ವರದಿಯಾಗಿದೆ: ಒಂದು ವರ್ಷ ದಾಟಿ ಹೋಗುವುದರೊಳಗೆ ಆ ಹತ್ಯೆಯಲ್ಲಿ ಭಾಗವಹಿಸಿದ ಎಲ್ಲ ದೌರ್ಜನ್ಯಗಾರರು ಕೊಲ್ಲಲ್ಪಟ್ಟರು.
(ಫತ್‌ಹಲ್‌ಬಾರಿ ಶರಹ್ ಸಹೀಹ್ ಅಲ್‌ಬುಖಾರಿ, ಭಾಗ-7, ಪುಟ-443, ದಾರುರ್‍ರೈಯಾನ್ ಲಿತ್ತುರಾಸುಲ್ ಖಾಹಿರಾ 1986)

ಆದಾಗ್ಯೂ, ಒಂದು ವರ್ಷದೊಳಗೆ ಎಲ್ಲ ದೌರ್ಜನ್ಯಗಾರರು ಹತರಾದರೆಂಬುದರ ಬಗ್ಗೆ ಬೇರೆ ಮೂಲಗಳಿಂದ ಸಾಬೀತಾಗುವುದಿಲ್ಲ. ಆದರೆ ಹೀಗೆ ಹೇಳಬಹುದು: ಆ ಜನರಲ್ಲಿ ಬಹುತೇಕ ಜನರು ಕೊಲ್ಲಲ್ಪಟ್ಟರು ಅಥವಾ ಮಕ್ಕದ ವಿಜಯ ಸಂಭವಿಸುವುದರೊಳಗೆ ಮುಸ್ಲಿಮರಾದರು. ಮತ್ತು ಹಝ್ರತ್ ಖುಬೈಬ್(ರ) ಅವರ ಪ್ರಾರ್ಥನೆಯು ವೈಭವದಿಂದ ನೆರವೇರಿತು, ಅವರಲ್ಲಿ ಕೆಲವರು ನರಕಕ್ಕೆ ಹೋದರು ಮತ್ತು ಉಳಿದವರು ಇಸ್ಲಾಂನ ಮಾರ್ಗದರ್ಶನದಿಂದ ಅನುಗ್ರಹಿಸಲ್ಪಟ್ಟರು.

ಒಬ್ಬ ಜೀವನ ಚರಿತ್ರೆಗಾರ ಹೀಗೆ ಬರೆದಿದ್ದಾರೆ: ಖುಬೈಬ್ ಹೇಳಿದ ಮಾತು ಆಲಿಸಿ ಎಲ್ಲ ಬಹುದೇವಾರಾಧಕರು ಕಂಪಿಸಿದರು. ಖುಬೈಬ್‌ರ ಆ ಪ್ರಾರ್ಥನೆ ನಿಷ್ಫಲವಾಗದೆಂದು ಅವರಿಗೆ ದೃಢವಿಶ್ವಾಸವಿತ್ತು. ಹಾರಿಸ್ ಬಿನ್ ಬರ್ಸಾ ಅಲ್ಲಿ ಇದ್ದರು. ಅವರು ಇನ್ನೂ ಮುಸ್ಲಿಂ ಆಗಿರಲಿಲ್ಲ. ಅವರು ಹೇಳಿದರು: ಖುಬೈಬ್(ರ) ಅವರ ಶಾಪವನ್ನು ಕೇಳಿದ ತಕ್ಷಣ, ಈ ಶಾಪವು ಅವರಲ್ಲಿ ಯಾರನ್ನೂ ಜೀವಂತವಾಗಿ ಬಿಡುವುದಿಲ್ಲ ಎಂದು ನನಗೆ ಖಾತ್ರಿಯಾತು. ಈ ಕಾರಣದಿಂದಲೇ ಕೆಲವರು ಜನರ ಹಿಂದೆ ಅಡಗಿಕೊಳ್ಳಲು ಪ್ರಾರಂಭಿಸಿದರು, ಅಂದರೆ, ಶಾಪಗಳ ಪರಿಣಾಮವನ್ನು ತಪ್ಪಿಸಲು, ಅವರು ತಮ್ಮ ಪದ್ಧತಿಯ ಪ್ರಕಾರ ಒಬ್ಬರ ಹಿಂದೆ ಒಬ್ಬರು ಅಡಗಿಕೊಳ್ಳಲು ಪ್ರಾರಂಭಿಸಿದರು, ಕೆಲವರು ಮರಗಳಿಗೆ ಹೋದರು ಮತ್ತು ಕೆಲವರು ನೆಲದ ಮೇಲೆ ಮಲಗಿದರು. ಹೀಗೆ ಮಾಡಿದರೆ ಈ ಶಾಪದಿಂದ ಪಾರಾಗುತ್ತೇವೆ ಎಂದುಕೊಂಡರು. ಒಬ್ಬ ಮನುಷ್ಯನು ಶಾಪಗ್ರಸ್ತನಾಗಿ ಅವನ ಬದಿಯಲ್ಲಿ ಮಲಗಿದರೆ, ಶಾಪದ ಪರಿಣಾಮವು ಕೊನೆಗೊಳ್ಳುತ್ತದೆ ಎಂದು ಅವರಲ್ಲಿ ಸಾಂಪ್ರದಾಯಿಕವಾಗಿ ತಿಳಿದಿತ್ತು.

ಹಝ್ರತ್ ಮುಆವಿಯಾ ಬಿನ್ ಅಬು ಸುಫ್ಯಾನ್(ರ) ಅವರು ತಮ್ಮ ಮತ್ತು ತಮ್ಮ ತಂದೆ ಇಸ್ಲಾಂ ಧರ್ಮವನ್ನು ಸ್ವೀಕರಿಸುವ ಮೊದಲು ನಡೆದ ಒಂದು ಘಟನೆಯನ್ನು ವಿವರಿಸುತ್ತಾರೆ, ಇತರ ಜನರಂತೆ ನಾನು ಕೂಡ ನನ್ನ ತಂದೆಯೊಂದಿಗೆ ಈ ಸ್ಥಳಕ್ಕೆ ತಲುಪಿದೆ. ಖುಬೈಬ್(ರ) ಅವರ ಪ್ರಾರ್ಥನೆಯಿಂದ ನನ್ನ ತಂದೆ ಭಯಗೊಂಡದ್ದನ್ನು ನಾನು ನೋಡಿದೆ. ಅವರು ನನ್ನನ್ನು ಮಲಗಿಸಲು ತುಂಬಾ ಕಷ್ಟಪಟ್ಟು ನೆಲಕ್ಕೆ ಎಳೆದರು. ನಾನು ಕೆಳಗೆ ಉರುಳಿದೆ. ಬೀಳುವಿಕೆಯಿಂದಾಗಿ, ನನಗೆ ಎಂತಹ ದೊಡ್ಡ ಗಾಯವಾಯಿತು ಎಂದರೆ ನಾನು ದೀರ್ಘಕಾಲದವರೆಗೆ ಅದರ ನೋವನ್ನು ಅನುಭವಿಸಿದೆ. ಹುವೈತಿಬ್ ಬಿನ್ ಅಬ್ದುಲ್ ಇಝ್ಝ ಮಕ್ಕಾ ವಿಜಯಿಸಿದ ದಿವಸ ಮಿಸ್ಲಿಮರಾದರು ಅವರು ಹೇಳುತ್ತಾರೆ: ಹಝ್ರತ್ ಖುಬೈಬ್(ರ) ಅವರ ಆವಾಹನೆಯನ್ನು ಕೇಳಿದ ತಕ್ಷಣ ನಾನು ನನ್ನ ಬೆರಳುಗಳನ್ನು

ನನ್ನ ಕಿವಿಗೆ ಹಾಕಿಕೊಂಡು ಓಡಿಹೋದೆ. ಅವರ ಶಾಪದ ಸದ್ದು ನನ್ನ ಕಿವಿಗೆ ಬೀಳಬಹುದೇನೋ ಎಂಬ ಭಯ ನನಗಿತ್ತು. ಹಝ್ರತ್ ಖುಬೈಬ್(ರ) ಅವರ ಶಾಪಕ್ಕೆ ಹೆದರಿ ನಾನು ಮರಗಳ ಹಿಂದೆ ಅಡಗಿಕೊಂಡೆ ಎಂದು ಹಕೀಮ್ ಬಿನ್ ಹಿಝಾಮ್ ಹೇಳುತ್ತಾರೆ. ಅಂದು ಹಝ್ರತ್ ಖುಬೈಬ್(ರ) ಅವರ ಶಾಪವನ್ನು ಎದುರಿಸಲು ನನಗೆ ಧೈರ್ಯವಾಗಲಿಲ್ಲ ಎಂದು ಜುಬೈರ್ ಬಿನ್ ಮುತ್‌ಅಮ್ ಹೇಳುತ್ತಾರೆ. ನಾನು ಹೆದರಿ ಜನರ ಹಿಂದೆ ಅಡಗಿಕೊಂಡೆ. ನೌಫಲ್ ಬಿನ್ ಮುಆವಿಯಾ ದೀಲೀ ಅವರು ಮಕ್ಕಾ ವಿಜಯದ ಸಂದರ್ಭದಲ್ಲಿ ಮುಸ್ಲಿಂ ಆದರು. ಅವರು ಹೇಳುತ್ತಾರೆ: ಆ ದಿನ ನಾನು ಖುಬೈಬ್(ರ) ಅವರ ಶಾಪದ ಸಮಯದಲ್ಲಿ ಇದ್ದೆ. ಅವರ ಶಾಪದಿಂದ ಅಲ್ಲಿನ ಜನರಲ್ಲಿ ಯಾರೂ ಬದುಕುಳಿಯುವುದಿಲ್ಲ ಎಂದು ನನಗೆ ಖಚಿತವಾಗಿತ್ತು. ಅವರ ಶಾಪದಿಂದ ಬೆಚ್ಚಿಬಿದ್ದು ನೆಲಕ್ಕೆ ಬಾಗಿದೆ. ಖುಬೈಬರ ಈ ಪ್ರಾರ್ಥನೆ ಬಗ್ಗೆ ಖುರೈಶಿಗಳು ಚರ್ಚಿಸುತ್ತಿದ್ದರು. ಒಂದು ತಿಂಗಳ ಕಾಲ ಅಥವಾ ಅದಕ್ಕಿಂತ ಹೆಚ್ಚು ಕಾಲ ಖುಬೈಬರು ಅವರ ವಿರುದ್ಧ ಮಾಡಿದ ಪ್ರಾರ್ಥನೆಯ ಭಯ ಅವರನ್ನು ಆವರಿಸಿತ್ತು. ಅವರು ಅದರ ಬಗ್ಗೆ ವಿವಿಧ ರೀತಿಗಳಲ್ಲಿ ವಿಮರ್ಶೆ ಮಾಡುತ್ತಿದ್ದರು.

(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ 470-471, ಮಕ್ತಬ ದಾರುಸ್ಸಲಾಮ್ ರಿಯಾದ್ 1434 ಹಿಜರಿ)

ಖುಬೈಬ್(ರ)ರನ್ನು ಹತ್ಯೆ ಮಾಡಿದ ಆ ಗುಂಪಿಗೆ ಸೇರಿದ ಒಬ್ಬ ವ್ಯಕ್ತಿ ಸಈದ್ ಬಿನ್ ಆಮಿರ್ ಆ ನಂತರ ಮುಸ್ಲಿಮರಾದರು. ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲದಲ್ಲಿ ಅವರ ಸ್ಥಿತಿ ಹೇಗಿತ್ತೆಂದರೆ ಹಝ್ರತ್ ಖುಬೈಬರ ಹತ್ಯೆ ಬಗ್ಗೆ ನೆನಪಾದಾಗಲೆಲ್ಲ ಅವರು ಪ್ರಜ್ಞಾಹೀನರಾಗುತ್ತಿದ್ದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-515-516)

ಹಝ್ರತ್ ಉಮರ್(ರ) ಸಈದ್‌ರನ್ನು ಶಾಮ್‌ದೇಶದ ಒಂದು ಪ್ರದೇಶದ ಅಧಿಕಾರಿಯನ್ನಾಗಿ ನೇಮಿಸಿದ್ದರು. ಅವರ ಸ್ಥಿತಿ ಹೇಗಿತ್ತೆಂದರೆ ಜನರ ಮಧ್ಯೆ ಹಝ್ರತ್ ಖುಬೈಬ್(ರ) ಬಗ್ಗೆ ಯಾರಾದರೂ ಪ್ರಸ್ತಾಪ ಮಾಡಿದರೆ ಸಈದರು ಪ್ರಜ್ಞಾಹೀನರಾಗುತ್ತಿದ್ದರು. ಅವರ ಬಗ್ಗೆ ಜನರು ಹಝ್ರತ್ ಉಮರ್(ರ)ರಿಗೆ ದೂರು ಹೇಳಿದರು: ನೀವು ಒಬ್ಬ ರೋಗಿಯನ್ನು ನಮ್ಮ ಮೇಲೆ ಅಧಿಕಾರಿಯನ್ನಾಗಿ ನೇಮಿಸಿರುವಿರಿ. ಸಈದ್ ಬಿನ್ ಆಮಿರ್ ಹಝ್ರತ್ ಉಮರ್(ರ)ರನ್ನು ಭೇಟಿಯಾಗಲು ಬಂದಾಗ ಅವರೊಂದಿಗೆ ಕೇಳಿದರು: ಹೇ ಸಈದ್ ನಿಮಗೆ ಯಾವುದಾದರೂ ರೋಗ ಬಾಧಿಸಿದೆಯೇ? ಸಈದ್ ಹೇಳಿದರು: ಇಲ್ಲ, ನನಗೆ ಯಾವ ರೋಗವೂ ಇಲ್ಲ. ನನಗೆ ಸಂಬಂಧಿಸಿದ ವಿಷಯವೇನೆಂದರೆ ಖುಬೈಬ್(ರ)ರನ್ನು ಹತ್ಯೆ ಮಾಡುವಾಗ ನಾನು ಅಲ್ಲಿದ್ದೆ. ನನಗೆ ಖುಬೈಬ್(ರ)ರವರ ಪ್ರಾರ್ಥನೆ ನೆನಪಿಗೆ ಬಂದಾಗ ನಾನು ಪ್ರಜ್ಞಾಹೀನನಾಗುತ್ತೇನೆ.

(ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶ್ಶಾಮ್, ಭಾಗ-2, ಪುಟ-150, ದಅರುಲ್ ಮಾರಿಫಾ ಬೈರೂತ್ 2000)

ಹಝ್ರತ್ ಖುಬೈಬ್(ರ) ಅವರ ಮೃತ ದೇಹವನ್ನು ಶಿಲುಭೆಯಿಂದ ಕೆಳಗಿಳಿಸಲು ಹಝ್ರತ್ ಪೈಗಂಬರ್(ಸ) ಅವರು ಒಂದು ಗುಂಪನ್ನು ಕಳುಹಿಸಿದರ ಬಗ್ಗೆ ಉಲ್ಲೇಖಿಸಲಾಗಿದೆ. ಮೃತದೇಹವು ಅಲ್ಲೇ ನೇತಾಡುವಂತೆ, ಕೊಳೆಯಲು ಅಥವಾ ನಂತರ ಅದರ ಸೇಡು ತೀರಿಸಿಕೊಳ್ಳಲು ಖುರೈಷರು ನಲವತ್ತು ಜನರನ್ನು ಶಿಲುಭೆಯ ರಕ್ಷಣೆಗೆ ನೇಮಿಸಿದ್ದರು ಎಂದು ಒಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಹಝ್ರತ್ ಮಿಖ್ದಾದ್(ರ) ಮತ್ತು ಹಝ್ರತ್ ಝುಬೈರ್ ಬಿನ್ ಅವಾಮ್(ರ) ಅವರನ್ನು ಮಕ್ಕಾದ ಕಡೆದೆ ಹಝ್ರತ್ ಖುಬೈಬ್(ರ) ಅವರ ಮೃತ ಶರೀರವನ್ನು ಶಿಲುಭೆಯಿಂದ ಕೆಳಗಿಳಿಸಲು ಕಳುಹಿಸಿದರು. ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ಸುದ್ದಿ ಲಭಿಸಿತ್ತು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ತಿಳಿಸಿರಬಹುದು. ಆದಾಗ್ಯೂ, ಒಂದು ವರದಿಯ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖುಬೈಬ್(ರ)ರವರ ಮೃತಶರೀರವನ್ನು ಇಳಿಸಿ ತರಲು ಯಾರು ಸಿದ್ಧರಾಗಿದ್ದೀರಿ ಎಂದು ಶಿಷ್ಯರೊಂದಿಗೆ ಕೇಳಿದಾಗ ಹಝ್ರತ್ ಝುಬೈರ್ ಬಿನ್ ಅವ್ವಾಮ್(ರ) ಹೇಳಿದರು: ನಾನು ಮತ್ತು ನನ್ನ ಸಂಗಡಿಗ ಮಿಖ್‌ದಾದ್ ಬಿನ್ ಅಸ್‌ವದ್ ಅದನ್ನು ಇಳಿಸಿ ತರುವೆವು. ಅವರಿಬ್ಬರು ಮೃತಶರೀರದ ಸಮೀಪಕ್ಕೆ ತಲಪಿದಾಗ ಅಲ್ಲಿ ನಲ್ವತ್ತು ಜನರಿದ್ದರು. ಆದರೆ ಅವರೆಲ್ಲರೂ ಎಚ್ಚರದಿಂದಿರಲಿಲ್ಲ. ನಿದ್ರಿಸುತ್ತಿದ್ದರು. ಅವರಿಬ್ಬರು ಮೃತಶರೀರವನ್ನು ಶಿಲುಬೆಯಿಂದ ಇಳಿಸಿದರು. ಈ ಘಟನೆ ಹಝ್ರತ್ ಖುಬೈಬ್(ರ) ಶಹೀದರಾಗಿ ನಲ್ವತ್ತು ದಿನಗಳು ದಾಟಿ ಹೋದಾಗ ಸಂಭವಿಸಿತು. ಹಝ್ರತ್ ಝುಬೈರ್(ರ) ಖುಬೈಬ್(ರ) ಅವರ ಮೃತಶರೀರವನ್ನು ತನ್ನ ಕುದುರೆಯ ಮೇಲೆ ಇರಿಸಿದರು ಮತ್ತು ಇಬ್ಬರೂ ನಡೆದರು. ಹಝ್ರತ್ ಖುಬೈಬ್(ರ) ಅವರು ಕಾಣೆಯಾಗಿದ್ದಾರೆ ಎಂದು ಅವಿಶ್ವಾಸಿಗಳಿಗೆ ಸುದ್ದಿ ಲಭಿಸಿದಾಗ ಅವರ ಅದರ ಬ್ಗಗೆ ಖುರೈಷಿಯರಿಗೆ ತಿಳಿಸಿದರು, ಅವರಲ್ಲಿ ಎಪ್ಪತ್ತು ಮಂದಿ ಹೊರಬಂದರು. ಹಿಂಬಾಲಿಸಲು ಇನ್ನೂ ಹೆಚ್ಚಿನ ಜನರನ್ನು ಸೇರಿಸಲಾಯಿತು. ನಂತರ ಖುರೈಶ್ ಜನರು ಈ ಇಬ್ಬರು ಸಹಾಬೀಯರ ಸಮೀಪ ಬಂದಾಗ, ಹಝ್ರತ್ ಝುಬೈರ್(ರ) ಅವರು ಹಝ್ರತ್ ಖುಬೈಬ್(ರ) ಅವರ ಮೃತಶರೀರವನ್ನು ನೆಲದ ಮೇಲೆ ಇರಿಸಿ ತಮ್ಮ ತಲೆಯಿಂದ ತಮ್ಮ ಪೇಟವನ್ನು ತೆಗೆದು ಅವರಿಗೆ ಹೇಳಿದರು, ನಾನು ಝುಬೈರ್ ಬಿನ್ ಅವಾಮ್ ಮತ್ತು ಇವರು ನನ್ನ ಸಹಚರ ಮಿಖ್ದಾದ್ ಬಿನ್ ಅಸ್ವದ್ ಆಗಿರುವರು, ವಾನಿಬ್ಬರೂ ನಮ್ಮ ಮಕ್ಕಳನ್ನು ಬಿಟ್ಟು ಹೋದ ಹೆಬ್ಬುಲಿಗಳಾಗಿದ್ದೇವೆ. ನೀವು ಬಯಸಿದರೆ, ನಾವು ನಿಮ್ಮನ್ನು ಬಾಣಗಳಿಂದ ಸ್ವಾಗತಿಸಬಹುದು ಮತ್ತು ನೀವು ಬಯಸಿದರೆ, ನಾವು ನಿಮ್ಮ ಮೇಲೆ ದಾಳಿ ಮಾಡಬಹುದು, ಮತ್ತು ನೀವು ಬಯಸಿದರೆ, ಇಲ್ಲಿಂದ ಹಿಂತಿರುಗಿ. ಇದನ್ನು ಕೇಳಿದ ಆ ಬಹುದೇವತಾವಾದಿಗಳು ಹಿಂತಿರುಗಿ ಹೋದರು ಮತ್ತು ಆ ನಂತರ ಹಝ್ರತ್ ಝುಬೈರ್(ರ) ಅವರು ಹಝ್ರತ್ ಖುಬೈಬ್(ರ) ಅವರ ಮೃತಶರೀರವು ಭೂಮಿಯನ್ನು ನುಂಗಿದಂತೆ ಕಾಣೆಯಾಗಿದೆ ಎಂದು ನೋಡಿದರು. ಆದ್ದರಿಂದ ಅವರ ಹೆಸರು **ಬಲೀಉಲ್ ಅರ್ಝ್** ಪ್ರಸಿದ್ಧವಾಯಿತು ಅಂದರೆ: ಭೂಮಿಯು ನುಂಗಿದ ವ್ಯಕ್ತಿ. ಮೃತದೇಹವು ಕಾಣೆಯಾಗಿದ್ದರ ಬಗ್ಗೆ ಇಂತಹ ವರದಿಯು ವಿಚಿತ್ರವಾಗಿ ಕಾಣುತ್ತದೆ. ಆದಾಗ್ಯೂ, ಒಂದು ವರದಿ ಇದೆ ಅದನ್ನು ನಾನು ನಂತರ ವಿವರಿಸುತ್ತೇನೆ, ಅದು ಮೃತದೇಹವು ಹೇಗೆ ಕಣ್ಮರೆಯಾಯಿತು ಎಂಬುದರ ಕುರಿತು ಸರಿಯಾಗಿ ತೋರುತ್ತದೆ. ಆದಾಗ್ಯೂ, ಹಝ್ರತ್ ಝುಬೈರ್(ರ) ಮತ್ತು ಹಝ್ರತ್ ಮಿಖ್ದಾದ್(ರ) ಮೇಲೆ ದೇವದೂತರ ಹೆಮ್ಮೆಯ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಝುಬೈರ್(ರ) ಮತ್ತು ಹಝ್ರತ್ ಮಿಖ್ದಾದ್(ರ) ಮದೀನಾವನ್ನು ತಲುಪಿದ ನಂತರ ಹಝ್ರತ್ ಪೈಗಂಬರ್(ಸ) ಅವರ ಬಳಿ ಆ ಸಮಯದಲ್ಲಿ ಜಿಬ್ರೀಲ್ ಜೊತೆಗಿದ್ದರು. ಜಿಬ್ರೀಲ್ ಅವರಿಗೆ(ಸ) ಹೇಳಿದರು: ಓ ಮುಹಮ್ಮದ್(ಸ)! ನಿಮ್ಮ ಈ ಇಬ್ಬರು ಸಹಾಬೀಯರ ಬಗ್ಗೆ ದೇವದೂತರು ಹೆಮ್ಮೆ ಪಡುತ್ತಾರೆ.

(ಸೀರತ್ ಹಲಬಿಯಾಹ್, ಸಂಪುಟ-3, ಪುಟ-236, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ತಾರಿಖ್ ಅಲ್-ಖಮೀಸ್, ಸಂಪುಟ-2, ಪುಟ-254, ದಾರುಲ್ ಕುತುಬ್ ಇಲ್‌ಮಿಯಾ, 2009)

ಜೀವನಚರಿತ್ರೆಯ ಪುಸ್ತಕಗಳಲ್ಲಿ, ಹಝ್ರತ್ ಖುಬೈಬ್(ರ) ಅವರ ಮೃತದೇಹವನ್ನು ತರಲು ಮತ್ತೊಂದು ಗುಂಪಿನ ನಿರ್ಗಮನದ ಉಲ್ಲೇಖವಿದೆ, ಹೀಗಾಗಿ, ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಮ್ರು ಬಿನ್ ಉಮಯ್ಯ(ರ) ಅವರನ್ನು ಏಕಾಂಗಿಯಾಗಿ ಗೂಢಚಾರಿಯಾಗಿ ಖುರೈಶರ ಬಳಿ ಕಳುಹಿಸಿದರು. ಅವರು ಹೇಳಿದರು: ನಾನು ಹಝ್ರತ್ ಖುಬೈಬ್(ರ) ಅವರ ಶಿಲುಭೆಯ ಬಳಿಗೆ ಬಂದೆನು. ನಾನು ಗೂಢಚಾರರ ಬಗ್ಗೆ ಭಯಭೀತನಾಗುತ್ತಿದ್ದೆ. ನಾನು ಶಿಲುಬೆಯ ಮೇಲೆ ಹತ್ತಿ ಹಝ್ರತ್ ಖುಬೈಬ್(ರ) ಅವರ ದೇಹವನ್ನು ಬಿಚ್ಚಿದಾಗ ಅದು ನೆಲದ ಮೇಲೆ ಬಿದ್ದಿತು. ನಾನು ಸ್ವಲ್ಪ ಸಮಯ ಪಕ್ಕಕ್ಕೆ ನಿಂತಿದ್ದೆ, ನನ್ನ ಹಿಂದೆ ಒಂದು ಧ್ವನಿ ಕೇಳಿಸಿತು. ನಾನು ನೋಡಿದಾಗ ಅಲ್ಲಿ ಹಝ್ರತ್ ಖುಬೈಬ್(ರ) ಅವರ ಮೃತದೇಹ ಕಾಣಿಸಲಿಲ್ಲ, ಅವರನ್ನು ಭೂಮಿ ನುಂಗಿದಂತೆ ಭಾಸವಾಯಿತು. ಇಲ್ಲಿಯವರೆಗೆ ಅದರ ಯಾವುದೇ ಕುರುಹು ಪತ್ತೆಯಾಗಿಲ್ಲ. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-6, ಪುಟ-45, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಇದರಲ್ಲಿಯು ಅತಿಶಯೋಕ್ತಿಯಿದೆ ಎಂದು ತೋರುತ್ತದೆ. ಆದಾಗ್ಯೂ, ಅಂತಹ ವರದಿಗಳು ಇತಿಹಾಸದಲ್ಲಿ ಬರೆಯಲ್ಪಟ್ಟಿವೆ. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಜಬ್ಬಾರ್ ಬಿನ್ ಸಖ್ರ್ ಅನ್ಸಾರಿ(ರ) ಅವರನ್ನು ಅಮ್ರ್ ಬಿನ್ ಉಮಯ್ಯ ಜಮ್ರಿ(ರ) ಅವರೊಂದಿಗೆ ಕಳುಹಿಸಲಾಗಿತ್ತು. ಹಝ್ರತ್ ಖುಬೈಬ್(ರ) ಅವರ ಮೃತದೇಹವನ್ನು ಕಾವಲು ಕಾಯುತ್ತಿದ್ದ ಖುರೈಷಿಗಳು ಅವರನ್ನು ಹಿಂಬಾಲಿಸಿದಾಗ, ಹಝ್ರತ್ ಜಬ್ಬಾರ್(ರ) ಹಝ್ರತ್ ಖುಬೈಬ್‌ರ ಮೃತಶರೀರವನ್ನು ನದಿಗೆ ಎಸೆದೆವು. ಈ ರೀತಿ ಸರ್ವಶಕ್ತನಾದ ಅಲ್ಲಾಹನು ಖುಬೈಬರ ಮೃತಶರೀರವನ್ನು ಅವಿಶ್ವಾಸಿಗಳಿಗೆ ದೊರಕದಂತೆ ಮಾಡಿದನು. (ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶಾಮ್, ಪುಟ-885, ದಅರುಲ್ ಕುತುಬ್ ಇಲ್‌ಮಿಯಾ ಬೈರುತ್ 2001) ಆದಾಗ್ಯೂ, ನಾನು ಹೇಳಿದಂತೆ, ಇದು ವಿಭಿನ್ನ ವರದಿಗಳನ್ನು ಹೊಂದಿದೆ.

ತುಂಬ ಸರಿ ಎನಿಸುವ ವರದಿ ಇದಾಗಿದೆ ಅಂದರೆ ಖುರೈಷಿಗಳು ಹಿಂಬಾಲಿಸಿದಾಗ ಅವರು ಅಂದರೆ ಹಝ್ರತ್ ಜಬ್ಬಾರ್(ರ) ಮೃತದೇಹವನ್ನು ನದಿಗೆ ಎಸೆದರು ಮತ್ತು ಆ ನದಿಯು ದೇಹವನ್ನು

ಕೊಚ್ಚಿಕೊಂಡು ಹೋಯಿತು. ಮತ್ತು ಹೀಗೆ ಸಂಭವಿಸುತ್ತದೆ ಮೃತದೇಹಗಳು ನದಿಗೆ ಬಿದ್ದಾಗ ಅದರ ಪ್ರವಾಹವು ದೇಹಗಳನ್ನು ಎಳೆದುಹೋಗುತ್ತದೆ. ಹೀಗೆ ಈ ಬಗ್ಗೆ ವಿಭಿನ್ನ ವರದಿಗಳಿವೆ. ಆದಾಗ್ಯೂ, ಅವರ ದೇಹವು ಅವಿಶ್ವಾಸಿಗಳ ಕೈಗೆ ಸಿಗಲಿಲ್ಲ ಮತ್ತು ಭೂಮಿಯು ಅದನ್ನು ನುಂಗಿ ಕಣ್ಮರೆಯಾಯಿತು ಎಂದು ಅವರು ಹೇಳುತ್ತಾರೆ. ಅದೇ ಹೆಸರಿನಿಂದ ಅಂದರೆ **ಬಲೀಉಲ್ ಅರ್ಝ್** ಎಂಬ ಹೆಸರಿನಿಂದ ಅವರು ಪ್ರಸಿದ್ಧಿ ಹೊಂದಿದರು. ಅವರ ಮೃತ ದೇಹವು ಭೂಮಿಯಲ್ಲಿ ಕಣ್ಮರೆಯಾಯಿತು. ಈ ರೀತಿ ಅಲ್ಲಾಹನು ಅವರ ದೇಹವನ್ನು ಶತ್ರುಗಳು ಅಪವಿತ್ರ ಗೊಳಿಸದಂತೆ ಮಾಡಿ ರಕ್ಷಿಸಿದನು. ಅವಿಶ್ವಾಸಿಗಳು ಏನನ್ನು ಮಾಡಲು ಇಚ್ಛಿಸುತ್ತಿದ್ದರೋ ಅದನ್ನು ಅವರಿಗೆ ಮಾಡಲಾಗಲಿಲ್ಲ.

ಅಲ್ಲಾಹನು ತನಗೆ ಪ್ರಿಯರಾದವರನ್ನು ಈ ರೀತಿ ಸಂರಕ್ಷಿಸುತ್ತಾನೆ. ಅನೇಕ ಇಂತಹ ಘಟನೆಗಳು ಸಂಭವಿಸಿವೆ. ಅಲ್ಲಾಹನು ಮೃತದೇಹಗಳನ್ನು ಶತ್ರುಗಳಿಂದ ರಕ್ಷಿಸಿರುವನು. ಹಿಂದೆ ನಾನು ಒಂದು ಸಂಭವ ವಿವರಿಸಿದ್ದೆ. ಅಲ್ಲಾಹನು ಕಣಜದ ಹುಳುಗಳು ಮತ್ತು ಜೇನುನೊಣಗಳ ಮೂಲಕ ಮೃತಶರೀರವನ್ನು ರಕ್ಷಿಸಿದನು. ಅದನ್ನು ಅಪಮಾನಗೊಳಿಸಲು ಶತ್ರುಗಳಿಗೆ ಸಾಧ್ಯವಾಗಲಿಲ್ಲ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–353, ದಆರುಲ್ ಕುತುಬ್ ಇಲ್‌ಮಿಯಾ ಬೈರುತ್ 1990) ಆದಾಗ್ಯೂ, ಇವರು ಅಲ್ಲಾಹನನ್ನು ಪ್ರೀತಿಸಿದ ಮತ್ತು ಅಲ್ಲಾಹನಿಗಾಗಿ ತ್ಯಾಗ ಮಾಡಿದ ಜನರಾಗಿದ್ದಾರೆ, ಮತ್ತು ಸರ್ವಶಕ್ತನಾದ ಅಲ್ಲಾಹನು ಸಹ ಅವರನ್ನೂ ಗೌರವಿಸಿದನು ಮತ್ತು ಅವರ ಮರಣದ ನಂತರವೂ ಅವರ ಮೃತಶರೀರಗಳನ್ನು ಸಂರಕ್ಷಿಸಿದನು. ಈ ಸರಿಯಾದ ಪ್ರಸ್ತಾವನೆ ಇಲ್ಲಿಗೆ ಮುಗಿಯುತ್ತದೆ.

ಪ್ರಾರ್ಥಿಸಬೇಕೆಂದು ನಾನು ಹೇಳುತ್ತಾ ಇರುತ್ತೇನೆ. ಪೆಲೆಸ್ತೀನಿಗಳಿಗೋಸ್ಕರ ಪ್ರಾರ್ಥಿಸಿರಿ. ಈಗ ಅತ್ಯಂತ ಹೆಚ್ಚು ಮಿತಿಮೀರಿದ ಸ್ಥಿತಿಯಾಗಿದೆ. ರಫಹದ ಬಗ್ಗೆ ಅಮೇರಿಕ ಹೇಳುತ್ತಿತ್ತು ಅದು ನಮ್ಮ ರೆಡ್‌ಲೈನ್ ಆಗುವುದು ಎಂದು. ಈಗ ಇಲ್ಲ ಎಂದು ಹೇಳುತ್ತಿದೆ, ಈಗ ಮುಗಿತಾಯವಾಲಾರದು ಎಂದು. ಅವರ ರೆಡ್‌ಲೈನ್ ಮಾನದಂಡ ಏನೆಂದು ತಿಳಿಯುವುದಿಲ್ಲ. ಎಷ್ಟು ಲಕ್ಷ ಜನರನ್ನು ಅವರು ಹತ್ಯೆ ಮಾಡಲಿಕ್ಕಿದೆ. ಅನಂತರ ಶಾಂತಿ ಸ್ಥಾಪಿತವಾಗುವುದು. ಸರ್ವಶಕ್ತನಾದ ಅಲ್ಲಾಹನು ಈ ದೌರ್ಜನ್ಯಗಾರರ ಕೆಡುಕುಗಳಿಂದ ಲೋಕವನ್ನು ರಕ್ಷಿಸುವವನಾಗಲಿ. ದೌರ್ಜನ್ಯ ಪೀಡಿತರಾದ ಫೆಲೆಸ್ತೀನ್ ಜನತೆಯನ್ನು ಅಲ್ಲಾಹನು ರಕ್ಷಿಸುವವನಾಗಲಿ – ಆಮೀನ್.

ಇದೇ ರೀತಿ ಸೂಡಾನಿನ ಜನರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಿ ಮುಸ್ಲಿಮರೇ ಮುಸ್ಲಿಮರನ್ನು ಕೊಲ್ಲುತ್ತಿದ್ದಾರೆ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಅವರು ಅಲ್ಲಾಹನ ಹಿಡಿತದಿಂದ ರಕ್ಷಣೆ ಪಡೆಯುವವರಾಗಲಿ. ಅಲ್ಲಾಹನ ಆಜ್ಞೆಗಳನ್ನು ಅವರು ಪಾಲಿಸುವವರಾಗಲಿ.

ಯಮನಿನಲ್ಲಿ ಬಂಧಿತರಾಗಿರುವವರಿಗೋಸ್ಕರ ಸಹ ಪ್ರಾರ್ಥಿಸಿರಿ.

ಪಾಕಿಸ್ತಾನಿನ ಅಹ್ಮದಿಯರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಿ ಸಹ ಸ್ಥಿತಿ ಮೇಲೆ ಕೆಳಗೆ ಆಗುತ್ತಾ ಇರುತ್ತದೆ. ಈದ್ ಸಮೀಪಿಸುತ್ತಿದೆ. ಈ ದಿನಗಳಲ್ಲಿ ಮೌಲವಿಗಳು ಹೆಚ್ಚು ಕ್ರಿಯಾಶೀಲರಾಗುತ್ತಾರೆ. ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಂದು ಕೆಡುಕಿನಿಂದ ಎಲ್ಲ ಅಹ್ಮದಿಯರನ್ನು ರಕ್ಷಿಸಲಿ. ಬಂಧಿಸಲ್ಪಟ್ಟವರ ಬಿಡುಗಡೆ ಬೇಗನೆ ಆಗುವಂತೆ ಅಲ್ಲಾಹನು ಮಾಡಲಿ – ಆಮೀನ್.

ಈಗ ನಾನು ಜುಮುಅದ ನಂತರ ನಮಾಝು ಜನಾಝು ಗ್ಹಾಯಿಬ್ ನಿರ್ವಹಿಸುತ್ತೇನೆ. ಅವರಲ್ಲಿ ಮೊದಲನೇಯ ಜನಾಝು ನಮ್ಮ ಓರ್ವ ಮುರಬ್ಬಿ ಚೌಧರಿ ಮನೀರ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಅವರು MTA ಇಂಟರ್ನ್ಯಾಷನಲ್ ಟೆಲಿಪೋರ್ಟ್ ಅಮೇರಿಕದ ನಿರ್ದೇಶಕರಾಗಿದ್ದರು. ಅವರು ಇತ್ತೀಚೆಗೆ ಎಪ್ಪತ್ತಮೂರು (73) ವಯಸ್ಸಿನಲ್ಲಿ ನಿಧನರಾದರು.

**ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಅವರ ಕುಟುಂಬದಲ್ಲಿ, ಅಹ್ಮದಿಯತ್ ಅವರ ಮುತ್ತಜ್ಜ ಹಝ್ರತ್ ಮೌಲ್ವಿ ಫಝ್ಲ್ ದೀನ್ ಸಾಹಿಬ್(ರ) ಅವರಿಂದ ಬಂದಿತು. ಅವರ ಹೆಸರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮುನ್ನೂರ ಹದಿಮೂರು ಸಹಾಬೀಯರ ಪಟ್ಟಿಯಲ್ಲಿ ಎರಡನೆಯದ್ದಾಗಿದೆ. ಚೌಧರಿ ಮುನೀರ್ ಸಾಹಿಬ್ 1978 ರಲ್ಲಿ ಜಾಮಿಯಾ ಅಹ್ಮದಿಯಾದಿಂದ ಶಾಹಿದ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರ ಅವರು ಪಾಕಿಸ್ತಾನದ ವಿವಿಧ ಸ್ಥಳಗಳಲ್ಲಿ ಮುರಬ್ಬಿಯಾಗಿ ಸೇವೆ ಸಲ್ಲಿಸಿದರು. ನಂತರ ಅವರಿಗೆ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಮುತಮಿದ್ ಆಗಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು. ಅವರನ್ನು 1981 ರಲ್ಲಿ ಅಮೆರಿಕಕ್ಕೆ ಕಳುಹಿಸಲಾಯಿತು. 1990ರವರೆಗೆ ಅಲ್ಲಿಯೇ ಇದ್ದರು. ತದನಂತರ ಅವರು ಮರಳಿದರು. ಪನಃ ಅವರು 1994 ರಲ್ಲಿ ಮತ್ತೆ ಅಮೇರಿಕಾಗೆ ಹೋದರು ಮತ್ತು ಕೊನೆಯುವರೆಗೂ ಅವರು ಜಮಾಅತ್‌ನ ಸೇವೆಯನ್ನು ಮುಂದುವರೆಸಿದರು. MTA ಟೆಲಿಪೋರ್ಟ್ ಅಮೇರಿಕಾ ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಮೊದಲು ಅಲ್ಲಿಂದಲೇ ಪ್ರಸಾರ ಮಾಡಲು ಒಂದು ಚಿಕ್ಕ ಸ್ಟುಡಿಯೋ ಆಗಿದ್ದು, ಉತ್ತರ, ದಕ್ಷಿಣ ಅಮೇರಿಕಕ್ಕೆ ಪ್ರತ್ಯೇಕ ವಿಭಾಗವನ್ನು ತೆರೆಯಲಾಯಿತು ಮತ್ತು ನಾನು ಅವರಿಗೆ ಅಲ್ಲಿ MTA ಯ ನಿರ್ದೇಶಕರಾಗಿ ನೇಮಿಸಿದೆ. ಮತ್ತು ಅವರು ಬಹಳ ಉತ್ಸಾಹದಿಂದ ಬಹಳ ಟೆಕ್ನಿಕಲ್ ಸ್ಕಿಲ್ಸ್ ಪಡೆದಿರಲಿಲ್ಲ, ಅವರು ಪ್ರಾಪಂಚಿಕ ಜ್ಞಾನವನ್ನು ಪಡೆಯಲಿಲ್ಲ, ಅಂದರೆ, ಅವರು ಯಾವುದೇ ಪದವಿಯೊಂದಿಗೆ ಅಧ್ಯಯನ ಮಾಡಲಿಲ್ಲ, ಆದರೆ ಈ ಕೆಲಸ ಮಾಡಬೇಕು ಎಂಬ ಉತ್ಸಾಹವಿತ್ತು ಆದ್ದರಿಂದ ಸ್ವತಃ ಜ್ಞಾನವನ್ನು ಗಳಿಸಿದರು ಮತ್ತು ಈ ಟೆಲಿಪೋರ್ಟ್ ಅನ್ನು ಬಹಳ ಉತ್ತಮ ರೀತಿಯಲ್ಲಿ ನಿರ್ವಹಿಸಿದರು ಮತ್ತು ಎಲ್ಲಾ ರೀತಿಯಲ್ಲಿ ಅದನ್ನು ಉನ್ನತ ತಾಂತ್ರಿಕ ಗುಣಮಟ್ಟಕ್ಕೆ ತಂದರು. ಅವರ ಪತ್ನಿಯನ್ನು ಹೊರತುಪಡಿಸಿ, ಅವರು ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ, ಅವರು ಯಾವಾಗಲೂ ಸರ್ವಶಕ್ತನಾದ ಅಲ್ಲಾಹನನ್ನು ಅವಲಂಬಿಸಿದ್ದರು ಮತ್ತು ಕಷ್ಟದ ಸಮಯದಲ್ಲಿ ಪ್ರಾರ್ಥನೆಯ ಮೇಲೆ ಕೇಂದ್ರೀಕರಿಸುತ್ತಿದ್ದರು. ನಿಮ್ಮ ಬಳಿ ಇರುವ ಯಾವುದೇ ಸಾಧನವನ್ನು ಬಳಸಿ ಮತ್ತು ನಂತರ ಯಾವಾಗಲೂ ಸರ್ವಶಕ್ತನಾದ ಅಲ್ಲಾಹನಿಗೆ ವಿಷಯವನ್ನು ಬಿಡಿ ಎಂದು ಅವರು ಹೇಳುತ್ತಿದ್ದರು. ಅತಿಥಿ ಸತ್ಕಾರದ ಗುಣವು ಬಹಳ ಪ್ರಮುಖವಾಗಿತ್ತು. ಎಲ್ಲಾ ಸಮಯದಲ್ಲೂ ಮನೆ ಸಂದರ್ಶಕರಿಗೆ ತೆರೆದಿರುತ್ತದೆ. ಮಕ್ಕಳಿಗೆ ಯಾವಾಗಲೂ ಖಿಲಾಫತ್ ನೊಂದಿಗೆ ದೃಢವಾದ ಸಂಬಂಧವನ್ನು ಹೊಂದಲು ಪ್ರೋತ್ಸಾಹಿಸುತ್ತಿದ್ದರು. ಅವರು MTA ಗಾಗಿ ಹೊಂದಿದ್ದ ಯಾವುದೇ ಕೌಶಲ್ಯಗಳನ್ನು ಬಳಸಿದರು, ಅವರ ಮಕ್ಕಳು ಹೇಳುತ್ತಾರೆ: ಅವರು ವಿವಿಧ ಸಮಯಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದಾಗ ಆಸ್ಪತ್ರೆಯಲ್ಲಿಯೂ ಸಹ ಅವರು ವಿವಿಧ ಸಮಯಗಳಲ್ಲಿ ದೀರ್ಘಕಾಲದವರೆಗೆ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆಸ್ಪತ್ರೆಗೆ ದಾಖಲಾದಾಗಲೂ ಅವರು MTAಗಾಗಿ ಅಲ್ಲಿಯೇ ಕೆಲಸ ಮಾಡುತ್ತಿದ್ದರು. ಹೀಗೆ ಅವರು ಒಬ್ಬ ವಾಖಿಫ್ ಝಿಂದಗಿಯ ಉನ್ನತ ಉದಾಹರಣೆಯಾಗಿದ್ದರು.

ಮಿರ್ಝಾ ಮುಗ್ಫೂರ್ ಅಹ್ಮದ್ ಸಾಹಿಬ್ ಅಮೀರ ಜಮಾಅತ್ ಅಮೇರಿಕಾ ಬರೆಯುತ್ತಾರೆ: ಅವರು ತಮ್ಮ ಕ್ಷೇತ್ರವನ್ನು ಸುಧಾರಿಸಲು ಶ್ರದ್ಧೆಯಿಂದ ಮತ್ತು ಗಮನದಿಂದ ಕೆಲಸ ಮಾಡಿದ್ದು ಮಾತ್ರವಲ್ಲದೆ ಜಮಾಅತ್‌ನ ಇತರ ಕೆಲಸಗಳಿಗೆ ತಮ್ಮ ಸಮಯ ಮತ್ತು ಜ್ಞಾನವನ್ನು ನೀಡಲು ಹಿಂಜರಿಯಲಿಲ್ಲ. ಅವರು ಬಹಳ ಸಂತೋಷ ಮತ್ತು ಗಮನದಿಂದ ಕೆಲವು ಜಮಾಅತಿನ ಕೆಲಸಗಳಲ್ಲಿ ವಿನೀತನಿಗೆ ಸಹಾಯ ಮಾಡಿದರು. ಜಮಾಅತಿನ ಹಿತದೃಷ್ಟಿಯಿಂದ ಏನಾದರೂ ಮಾಹಿತಿ ಬಂದರೆ ಜಮಾಅತಿನ ಆಡಳಿತವನ್ನು ಸಂಪರ್ಕಿಸಿ ಗಮನ ಸೆಳೆಯುತ್ತಿದ್ದರು. ಜಮಾಅತ್‌ನ ವ್ಯವಸ್ಥೆಯೊಂದಿಗೆ ಸಂಪೂರ್ಣ ಸಹಕಾರ ಮತ್ತು ಅದರ ಪ್ರಾಮುಖ್ಯತೆ ಅವರ ಮಾತುಗಳು ಮತ್ತು ಕಾರ್ಯಗಳಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಅವರು ಖಿಲಾಫತ್‌ಗೆ ಅಧೀನರಾಗಿದ್ದರು ಮತ್ತು ವಿಧೇಯರಾಗಿದ್ದರು. ಆ ಕಾಲದ ಆದೇಶಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅನುಸರಿಸಲು ಖಲೀಫರು ಯಾವಾಗಲೂ ಸಿದ್ಧರಾಗಿದ್ದರು. ಖಲೀಫತುಲ್ ಮಸೀಹ್ ಅವರ ಆಶಯಗಳು ಮತ್ತು ನಿರೀಕ್ಷೆಗಳನ್ನು ಪೂರೈಸಲು ಅವರು ಯಾವಾಗಲೂ ಶ್ರದ್ಧೆಯಿಂದ ಪ್ರಯತ್ನಿಸುತ್ತಿರುವುದನ್ನು ನಾನು ಕಂಡುಕೊಂಡಿದ್ದೇನೆ ಎಂದು ಹೇಳುತ್ತಾರೆ.

ಅವರಿಗೂ ಪ್ರಿಯರಾದ ಅಮೀರ್ ಜಮಾಅತ್ ಬುರ್ಕಿನಾ ಫಾಸೊ ಅವರು ಬರೆಯುತ್ತಾರೆ: ಬಾಲ್ಯವಸ್ಥೆಯ ಒಂದು ಪ್ರಸಿದ್ಧ ಘಟನೆಯಿದೆ, ಅವರು ಕೆಲವು ತಿಂಗಳು ಪ್ರಾಯದ ಶಿಶು ಆಗಿದ್ದರು ಆಗ ಅವರು ಬಹಳ ತೀವ್ರ ಅನಾರೋಗ್ಯಕ್ಕೆ ಒಳಗಾದರು. ಅಂತಿಮ ಸಮಯದ ಕುರುಹುಗಳು ಎಂದು ಭಾಸವಾಗುತ್ತಿತ್ತು. ಮೌಲಾನಾ ಗುಲಾಮ್ ರಸೂಲ್ ರಾಜಕಿ(ರ) ಆ ದಿನಗಳಲ್ಲಿ ಅವರ ಪ್ರದೇಶದಲ್ಲಿ ತಂಗಿದ್ದರು. ಅವರ ತಾಯಿಯು ಅವರ ಅನಾರೋಗ್ಯದ ಬಗ್ಗೆ ಭಯಭೀತರಾಗಿ, ಅವರನ್ನು ಮೌಲ್ವಿ ಸಾಹಿಬ್(ರ) ಬಳಿಗೆ ಕರೆದೊಯ್ದು ಮೌಲ್ವಿ ಸಾಹೇಬರಿಗೆ ಕೊಟ್ಟು ಹೇಳಿದರು, ಮೌಲ್ವಿ ಸಾಹಿಬ್! ಅದು ಹೋಯಿತು ಮತ್ತು ಆಕೆಯು ಅಳುತ್ತಿದ್ದಳು. ಮೌಲ್ವಿ ಸಾಹೇಬರು ಮಗುವನ್ನು ಎತ್ತಿಕೊಂಡು ಹೇಳಿದರು: ಅದು ಚೆನ್ನಾಗಿರುತ್ತದೆ, ಅವನಿಗೆ ಅರ್ಪಿಸಿಬಿಡಿ. ಹೀಗೆ ಅವರು ತಮ್ಮ ಬಾಲ್ಯದಲ್ಲಿ ಸಮರ್ಪಣಾಭಾವಿಯಾದರು. ಅಲ್ಲಿ ತಾಯಿ ಅದನ್ನು ಅರ್ಪಿಸುವುದಾಗಿ ಭರವಸೆ ನೀಡಿದರು. ಅವರು ಸ್ವತಃ ಹೇಳುತ್ತಿದ್ದರು: ನನಗೆ ಮೀರ್ ಸಾಹಿಬ್ ಸಲಹೆ ನೀಡಿದರ ಏಕೆಂದರೆ ನಾನು ಓದಿನಲ್ಲಿ ಉತ್ತಮವಾಗಿರಲಿಲ್ಲ, ನಾನು

ನಿರಂತರವಾಗಿ ಸೂರಾ ಫಾತಿಹಾವನ್ನು ಅಸೆಂಬ್ಲಿಯಲ್ಲಿ ಪಠಿಸಲು ನನಗೆ ಸಲಹೆ ನೀಡಿದರು.

ಶಂಶಾದ್ ನಾಸಿರ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಹೇಳುತ್ತಾರೆ ಮತ್ತು ಬಹುತೇಕ ಎಲ್ಲರೂ ಅವರ ಗುಣಗಳ ಬಗ್ಗೆ ಬರೆದಿರುವುದೇನೆಂದರೆ: ಅವರು ಖಿಲಾಫತ್‌ನ ಆದೇಶಗಳನ್ನು ನೆರವೇರಿಸಲು ಸಂಪೂರ್ಣ ಶ್ರದ್ಧೆ ಹಾಗೂ ವಿಧೇಯಭಾವದಿಂದ ಅನುಸರಿಸುತ್ತಿದ್ದರು. ಅವರು ಆಗಾಗ್ಗೆ ಅನಾರೋಗ್ಯದಿಂದ ಬಳಲುತ್ತಿದ್ದರೂ, ಅವರು ಎಂದಿಗೂ ನೋವಿನಲ್ಲಿದ್ದಾರೆಂದು ಯಾರಿಗೂ ಹೇಳಲಿಲ್ಲ ಮತ್ತು ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡರು. ಎಲ್ಲವನ್ನೂ ಆಳವಾಗಿ ಅಧ್ಯಯನ ಮಾಡುವುದು. ಮತ್ತೆ ಮುರಬ್ಬಿಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅವರು ಅತ್ಯುತ್ತಮ ಆಡಳಿತಗಾರರೂ ಆಗಿದ್ದರು ಮತ್ತು ಸಹೋದ್ಯೋಗಿಗಳನ್ನು ತುಂಬಾ ಕರುಣೆಯಿಂದ ನಡೆಸಿಕೊಂಡರು. ಆತಿಥ್ಯವೂ ಅವರಲ್ಲಿತ್ತು. ಇದನ್ನು ಕೇವಲ ಮಕ್ಕಳಲ್ಲದೆ ಅನ್ಯರೂ ಸಹ ಗಮನಿಸಿದ್ದಾರೆ. ಎಲ್ಲರನ್ನೂ ನಗುಮುಖದಿಂದ ಭೇಟಿಯಾಗುವುದು ಅವರ ಗುಣವಾಗಿತ್ತು. ಅವರ ಬಹಳ ನಮ್ರ ಸ್ವಭಾವದವರಾಗಿದ್ದರು. ಆದರೆ ಅವರು ಧೈರ್ಯದಿಂದ ಕೆಲಸ ಮಾಡಿದರು. ಅಲ್ಲಾಹನು ಅವರ ಮನಸ್ಸಿನಲ್ಲಿ ವಿಚಿತ್ರವಾದ ಸಾಮರ್ಥ್ಯಗಳನ್ನು ಇರಿಸಿದನು. ಅವರು ಉರಬ್ಬಿಯಾಗಿದ್ದರು, ಆದರೆ ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರಹ್) ಅವರನ್ನು ಅರ್ಥ್ ಸ್ಟೇಷನ್‌ನಲ್ಲಿ ನೇಮಿಸಿದಾಗ, ಅವರು ಎಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿದರು ಮತ್ತು ನಂತರ ಅದನ್ನು ಅತ್ಯಂತ ಯಶಸ್ಸಿಗೆ ಕೊಂಡೊಯ್ದರು.

ಹೊಸ ಡಿಶ್ ಅನ್ನು ಅಳವಡಿಸಲು ಪ್ರಕ್ರಿಯೆಯು ಪ್ರಾರಂಭವಾದಾಗ ಪ್ರೋಗ್ರಾಂ ಅಲ್ಲಿಂದ ಯುನೈಟೆಡ್ ಸ್ಟೇಟ್ಸ್‌ನಾದ್ಯಂತ ರವಾನೆಯಾಗಲು, ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗಿತ್ತು. ಇನ್ಸ್ ಪೆಕ್ಟರ್ ಅಲ್ಲಿಂದ ಬಂದು ಪರ್ಮಿಷನ್ ಕೊಡಲಿಲ್ಲ, ಫಾರಂಗೆ ಸಹಿ ಹಾಕಲಿಲ್ಲ. ಆದಾಗ್ಯೂ, ಅವರು ಮತ್ತೆ ನನಗೆ ಪತ್ರ ಬರೆದರು. ಅದಕ್ಕೆ ನಾನು ಅವರಿಗೆ ಹೇಳಿದೆ: ನೀವು ಪ್ರಯತ್ನಿಸುತ್ತಾ ಇರಿ ಸರ್ವಶಕ್ತನಾದ ಅಲ್ಲಾಹನು ಸಹಾಯ ಮಾಡುವನು. ಸ್ವಲ್ಪ ಸಮಯದ ನಂತರ ಘಾನಾ ನಿವಾಸಿಯಾಗಿದ್ದ ಇನ್ಸ್‌ಪೆಕ್ಟರ್ ಮತ್ತೆ ಬಂದರು. ಜಮಾಅತ್ ಹೆಸರು ಕೇಳಿದಾಗ ನಾನು ಕೂಡ ಜಮಾಅತ್ ನ ಅಹ್ಮದಿಯಾ ಶಾಲೆಯಲ್ಲಿ ಓದಿರುವೆನು ಎಂದು ಹೇಳಿ ಅಲ್ಲಿಯೇ ಸಹಿ ಮಾಡಿದರು ಹೀಗೆ ಅಲ್ಲಿಯೇ ಅನುಮತಿ ಪಡೆದರು. ಹಾಗಾಗಿ ಇದು ಸರ್ವಶಕ್ತನಾದ ಅಲ್ಲಾಹನ ವಿಶೇಷ ಬೆಂಬಲವೂ ಆಗಿತ್ತು. ಅವರ ಕಠಿಣ ಪರಿಶ್ರಮ ಮತ್ತು ದುವಾದಿಂದ, ಸರ್ವಶಕ್ತನಾದ ಅಲ್ಲಾಹನು ಈ ಕೆಲಸವನ್ನು ಸುಲಭಗೊಳಿಸಿದನು.

ಲಯೀಖ್ ಮುಷ್ತಾಕ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಸುರಿನಾಮ್ ಆಗಿದ್ದಾರೆ ಅವರು ಹೇಳುತ್ತಾರೆ: ಅವರು ದಕ್ಷಿಣ ಅಮೆರಿಕಾದ ದೇಶಗಳಿಗೆ ಭೇಟಿ ನೀಡಿ MTA ಬಗ್ಗೆ ಮಾಹಿತಿ ಪಡೆದರು. ಮೂರು ದಿನಗಳ ಕಾಲ ಸುರಿನಾಮ್‌ನಲ್ಲಿ ತಂಗಿದ್ದರು ಮತ್ತು ಅವರು ಹೇಳಿದರು, ಖಲೀಫರು ನನ್ನನ್ನು ಒಂದು ಉದ್ದೇಶಕ್ಕಾಗಿ ಇಲ್ಲಿಗೆ ಕಳುಹಿಸಿದ್ದಾರೆ. ನಾನು ಈ ಕೆಲಸವನ್ನು ಮಾತ್ರ ಮಾಡುತ್ತೇನೆ, ಆದ್ದರಿಂದ ಯಾವುದೇ ಪ್ರವಾಸ ಕಾರ್ಯಕ್ರಮವಿರುವುದಿಲ್ಲ. ಮತ್ತು ಸಂಪೂರ್ಣ ಸಮಯ MTA ಪ್ರಸಾರ ಪರೀಕ್ಷೆಗಳು, ಮನೆಗಳಿಗೆ ಭೇಟಿ ನೀಡುವ ಮೂಲಕ ಸದಸ್ಯರು ಕಳೆದರು. MTA ಅನ್ನು ಹೇಗೆ ಬಳಸುವುದು ಮತ್ತು MTA ಪ್ರಸಾರದ ಸಮಯದಲ್ಲಿ ಯುವಕರು ಎದುರಿಸುವ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು ಎಂಬುದರ ಕುರಿತು ಜಮಾಅತಿನ ಸದಸ್ಯರಿಗೆ ಶಿಕ್ಷಣ ನೀಡಿದರು. ಇವರು ಹೇಳುತ್ತಾರೆ: ಒಮ್ಮೆ ನನ್ನೊಂದಿಗೆ ಮುರಬ್ಬಿ ಸಾಹೇಬರು ನನ್ನ ಬಗ್ಗೆ ದೂರು ನೀಡಿದ್ದರು. ಕೆಲವೊಮ್ಮೆ ಮುರಬ್ಬಿಯರೂ ಇಂತಹ ಅನುಮಾನಗಳನ್ನು ಮಾಡುತ್ತಾರೆ. ಈಗಂತೂ ಏಳು ವರ್ಷ ಜಾಮಿಯಾದಲ್ಲಿ ಪಾಠ ಮಾಡಿದ್ದೇವೆ. ಈಗ ನಮಗೆ ಕಚೇರಿಯಲ್ಲಿ ಕೂರಿಸಿದ್ದಾರೆ. ಹಾಗಾಗಿ ನಾನು, ಚೌಧರಿ ಮುನೀರ್ ಸಾಹಿಬ್ ಅವರಿಗೆ ಉತ್ತರಿಸಿದರು ಖಲೀಫರಿಗೆ ಯಾರೊಂದಿಗೆ ಯಾವಾಗ ಏನು ಕೆಲಸ ಪಡೆಯಬೇಕೆಂದು ಚೆನ್ನಾಗಿ ತಿಳಿದಿದೆ. ನಾನೊಬ್ಬ ಮುಬಲ್ಲಿಗ್ ಸಿಲ್‌ಸಿಲಾ ಆಗಿದ್ದೇನೆ. ಅವರು ಹೇಳುತ್ತಾರೆ ನಾನು ಸಹ ಮುಬಲ್ಲಿಗ್ ಆಗಿದ್ದೇನೆ, ಆದರೆ ಕಳೆದ ಹದಿನೈದು ವರ್ಷಗಳಿಂದ ನಾನು ಖಲೀಫರ ಆದೇಶದ ಮೇರೆಗೆ ಟೆಲಿಪೋರ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ತಾಂತ್ರಿಕ ಕೆಲಸವನ್ನೂ ಮಾಡುತ್ತೇನೆ. ಖಲೀಫರಿಂದ ಬೀದಿಗಳನ್ನು ಗುಡಿಸುವಂತೆ ಕೇಳಿದರೆ, ನಾನು ಅದನ್ನು ತುಂಬುಹೃದಯದೊಂದಿಗೆ ಮಾಡುತ್ತೇನೆ ಮತ್ತು ನಾನು ನನ್ನನ್ನು ಕಸಗುಡಿಸುವವನು ಎಂದು ಕರೆಯುತ್ತೇನೆ.

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಸಹ ಒಮ್ಮೆ ಹೇಳಿದರು: ಇಲ್ಲಿ ಮುರಬ್ಬಿಯರನ್ನು ನೇಮಿಸುವ ಸಮಯ ಬರುತ್ತದೆ. ನಮ್ಮ ಕಚೇರಿಯ ಸಿಬ್ಬಂದಿಗಳೂ ಮುರಬ್ಬಿಗಳೇ ಆಗಿರುವರು. ಮತ್ತೊಬ್ಬ ಕ್ಲೆರಿಕಲ್ ಸಿಬ್ಬಂದಿಯನ್ನು ತೆಗೆದುಕೊಳ್ಳಬೇಕು ಎಂದಲ್ಲ. ಆದ್ದರಿಂದ, ಪ್ರತಿಯೊಬ್ಬ ಮುರಬ್ಬಿಯರು ತಮ್ಮ ಮನಸ್ಸಿನಿಂದ ಇದನ್ನು ತೆಗೆದುಹಾಕಿ ಅವನಿಂದ ಯಾವ ಸೇವೆಯನ್ನು ಎಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು. ಅವರು ಜಾಮಿಯಾದಲ್ಲಿ ಓದಿದ್ದರೆ, ಧಾರ್ಮಿಕ ಜ್ಞಾನವನ್ನು ಗಳಿಸಿರುವುದು ಒಳ್ಳೆಯದು. ಆ ಧಾರ್ಮಿಕ ಜ್ಞಾನವನ್ನು ನಿರಂತರವಾಗಿ ಬಳಸಬೇಕು.

ಗಾಲಿಬ್ ಖಾನ್ ಅವರು MTA ಸ್ಟುಡಿಯೋಸ್ ಅಮೆರಿಕದ ಉಸ್ತುವಾರಿ ವಹಿಸಿದ್ದಾರೆ, ಅವರು ಹೇಳುತ್ತಾರೆ: ಅವರು ಪ್ರತಿ ಕೆಲಸವನ್ನು ಸ್ವತಃ ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದರು. ಅವರ ದಾಖಲೆ ನಿರ್ವಹಣೆ, ಸಿಬ್ಬಂದಿ ಸಮಯ, ಸ್ಥಳ ವೀಕ್ಷಣೆ, ಕಟ್ಟಡದ ಸ್ವಚ್ಛತೆ ಎಲ್ಲವನ್ನೂ ಅವರೇ ವಹಿಸಿಕೊಂಡರು. ಮತ್ತು ಈ ವ್ಯವಸ್ಥೆಯನ್ನು ಹೇಗೆ ಸುಧಾರಿಸುವುದು ಎಂಬುದರ ಮೇಲೆ ಯಾವಾಗಲೂ ಗಮನ ಹರಿಸುತ್ತಿದ್ದರು. ಮತ್ತು ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಸೌಮ್ಯವಾಗಿ ವರ್ತಿಸುತ್ತಿದ್ದರು. ಅವರು ಉತ್ತಮ ಆಡಳಿತಗಾರರಾಗಿದ್ದರು ಅದರೊಂದಿಗೆ ಬಲವಾದ ಇಚ್ಛಾಶಕ್ತಿಯುಳ್ಳವರಾಗಿದ್ದರು.

ಮಿರ್ಝಾ ಮುಹಮ್ಮದ್ ಅಫ್ಜಲ್ ಸಾಹಿಬ್ ಬರೆಯುತ್ತಾರೆ: ಅವರು ಅವರನ್ನು ಐವತ್ತಾರು ವರ್ಷಗಳಿಂದ ತಿಳಿದಿದ್ದರು. ಅವರು ಒಟ್ಟಿಗೆ ಅಮೆರಿಕಕ್ಕೆ ಬಂದರು. ಅವರು ಖಲೀಫರ ಭಕ್ತರಾಗಿದ್ದರು. 1974ರಲ್ಲಿ ಸೆರೆವಾಸವನ್ನು (ಅಸೀರಾನೆ ರಾಹೆಮೌಲಾ) ಪಡೆದರು. ಅವರು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ತುಂಬಿದ್ದರು. ಪ್ರೀತಿಮನೋಭಾವದಿಂದ ಸೇವೆಸಲ್ಲಿಸುತ್ತಿದ್ದರು. ಕೆಲಸದ ರೀತಿ ಬಹಳ ಸಂಘಟಿತವಾಗಿತ್ತು. ಯಾವುದೇ ಸೇವೆಯನ್ನು ನಿರಾಕರಿಸುವ ಸ್ವಭಾವ ಅವರದಲ್ಲ. ಅವರು ಯಾವಾಗಲೂ ಖಿಲಾಫತ್‌ಗೆ ಸುಲ್ತಾನ್ ನಸೀರ್ ಎಂದು ಕಂಡುಬಂದರು.

ಝಫರ್ ಸರ್ವರ್ ಸಾಹಿಬ್ ಹೇಳುತ್ತಾರೆ: ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರವರಿಗೆ ತಾಂತ್ರಿಕ ಕೆಲಸಕ್ಕಾಗಿ ಇಂಜಿನಿಯರ್ ಅನ್ನು ನೀಡಬೇಕೆಂದು ವಿನಂತಿಸಿದರು, ನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರಿಗೆ ಹೇಳಿದರು ನೀವೇ ಇಂಜಿನಿಯರ್ ಆಗಲು ಪ್ರಯತ್ನಿಸಿರಿ.

ನಂತರ ಅವರು ಸ್ವತಃ ಈ ಕೆಲಸವನ್ನು ಕಲಿತು ಕರಗತ ಮಾಡಿಕೊಂಡರು ಮತ್ತು ಅವರು ಹೃದಯ ಕಾಯಿಲೆಯಿಂದ ಬಳಲುತ್ತಿದ್ದರೂ ಇಪ್ಪತ್ತೊಂಬತ್ತು ವರ್ಷಗಳ ಕಾಲ MTAಗೆ ಸೇವೆ ಸಲ್ಲಿಸಿದರು ಈಗ MTA ಕಾರ್ಯಕ್ರಮಗಳನ್ನು ಉತ್ತರ ಅಮೆರಿಕ, ದಕ್ಷಿಣ ಅಮೆರಿಕಗಳಲ್ಲಿ ಆರಾಮವಾಗಿ ವೀಕ್ಷಿಸಬಹುದು.

ಡಾ. ಹಮೀದುರ್ ರೆಹಮಾನ್ ಸಾಹಿಬ್ ಅವರು ಲಾಸ್ ಏಂಜಲೀಸ್ ಅಮೇರಿಕಾದಿಂದ ಬರೆಯುತ್ತಾರೆ: ಅವರು 1993 ರಲ್ಲಿ ಲಾಸ್ ಏಂಜಲೀಸ್ನಲ್ಲಿ ನೇಮಕಗೊಂಡರು. ನಮ್ಮೊಂದಿಗೆ ಅವರು ಚಿನೋದಲ್ಲಿ ಭೂಮಿಯನ್ನು ಖರೀದಿಸಿದರು ಮತ್ತು ತಕ್ಷಣವೇ ಮಸೀದಿಯನ್ನು ನಿರ್ಮಿಸಲು ಪ್ರಯತ್ನಿಸಿದರು. ಮೃತರು ಬಹಳ ನಿರ್ಭೀತ ಮತ್ತು ಅಲ್ಲಾಹನಲ್ಲಿ ನಂಬಿಕೆಯಿಟ್ಟ ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಜಮಾಅತ್ ಅನ್ನು ಪರಿಚಯಿಸಲು ಚಿನೋ ಮೇಯರ್ ಕಚೇರಿಗೆ ಹೋದರು ಮತ್ತು ಪರಿಚಯವನ್ನು ಮಾಡಿದ ನಂತರ ಚಿನೋದಲ್ಲಿ ಮಸೀದಿ ನಿರ್ಮಾಣದ ಬಗ್ಗೆ ಹೇಳಿದರು. ಮೇಯರ್ ತಕ್ಷಣವೇ ಹೇಳಿದನು: ಇಲ್ಲಿ ಮಸೀದಿಯನ್ನು ನಿರ್ಮಿಸಲಾಗುವುದಿಲ್ಲ. ಮತ್ತು ಬಹಳ ಕೋಪದಿಂದ ಹೀಗೆ ಹೇಳಿದನು Over My Dead Body. ಇದನ್ನು ಕೇಳಿದ ಚೌಧರಿ ಸಾಹಿಬ್ ಅಸಾಧಾರಣ ಉತ್ಸಾಹದಿಂದ ಎದ್ದುನಿಂತು ಹೇಳಿದರು: ಮೇಯರ್ ಸಾಹೇಬರೇ! ಈ ಮಸೀದಿಯು ಸರ್ವಶಕ್ತನಾದ ಅಲ್ಲಾಹನ ಆರಾಧನೆಯ ಸ್ಥಳವಾಗಿದೆ ಮತ್ತು ನಿರ್ಮಿಸಲಾಗುವುದು ಮತ್ತು ಅವಶ್ಯವಾಗಿ ನಿರ್ಮಿಸಲಾಗುವುದು! ಹಾಗಾಗಿ ಅಲ್ಹಮ್ದುಲಿಲ್ಲಾಹ್, ಅಲ್ಲಿ ಮಸೀದಿಯನ್ನು ನಿರ್ಮಿಸಲಾಯಿತು ಮತ್ತು ನಂತರ ಅದೇ ಮೇಯರ್ ಮಸೀದಿಗೆ ಬಂದು ಕ್ಷಮೆ ಕೇಳಿದರು ಮತ್ತು ನಂತರ ಅವರು ಮಸೀದಿಗೆ ಅನೇಕ ಬಾರಿ ಬರುತ್ತಿದ್ದರು. ಅವರು ಬಹಳ ನಿರ್ಭೀತ ವ್ಯಕ್ತಿಯಾಗಿದ್ದರು.

ಹಮ್ಮಾದ್ ಸಾಹಿಬ್ ಮುರಬ್ಬಿಯಾಗಿದ್ದಾರೆ. ಮುನೀರ್ ಸಾಹಿಬ್ ಅವರು ಅವರ ಸಬಂಧಿ ಆಗಿದ್ದರು ಅವರು ಹೇಳುತ್ತಾರೆ: ನಾನು ಕಾರ್ಯಕ್ಷೇತ್ರಕ್ಕೆ ಬಂದಾಗ ಆರಂಭದಲ್ಲಿ ನನಗೆ ಬಹಳಷ್ಟು ಸಂಕಷ್ಟಗಳನ್ನು ಎದುರಾದವು. ಬಹಳ ಪ್ರೀತಿಯಿಂದ ನನ್ನ ಮಾತುಗಳನ್ನು ಆಲಿಸಿ ನನಗೆ ವಿವರಿಸಿದರು. ಬಹಳ ಉತ್ತಮ ಬುದ್ಧಿವಂತ ಸಲಹೆಗಳನ್ನು ನೀಡಿದರು ಮತ್ತು ಹೀಗಾಗಿ ಇದ್ದ ಸಮಸ್ಯೆಗಳು ಮತ್ತು ತೊಂದರೆಗಳನ್ನು ನನಗೆ ಸ್ವಯಂಚಾಲಿತವಾಗಿ ಪರಿಹರಿಸಲಾಯಿತು. ನಾನು ಅನೇಕ ವಿಷಯಗಳಲ್ಲಿ ಅವರಿಂದ ಸಲಹೆ ಪಡೆಯುತ್ತಿದ್ದೆ.

MTA ನಿರ್ದೇಶಕ ಮುನೀರ್ ಶಾಮ್ಸ್ ಸಾಃಇಬ್ ಹೇಳುತ್ತಾರೆ:

ಅವರು ಟೆಲಿಪೋರ್ಟ್ ಅನ್ನು ಉತ್ತಮ ರೀತಿಯಲ್ಲಿ ಸ್ಥಾಪಿಸಿದ್ದಾರೆ. ಚೌಧರಿ ಮುನೀರ್ ಸಾಹಿಬ್ ಅವರ ಒಂದು ಗುಣವೆಂದರೆ ಅವರು ಯಾವಾಗಲೂ ಪ್ರತಿ ಕೆಲಸದಲ್ಲಿ ಸಲಹೆಯೊಂದಿಗೆ ಜಮಾಅತ್‌ನ ಹಣವನ್ನು ಉಳಿಸಲು ಪ್ರಯತ್ನಿಸುತ್ತಿದ್ದರು ಮತ್ತು ಸಂಪೂರ್ಣವಾಗಿ ಅಗತ್ಯವಿರುವ ಯಂತ್ರೋಪಕರಣಗಳನ್ನು ಮಾತ್ರ ಸಂಗ್ರಹಿಸಿದರು. ಅವರ ಪ್ರತಿಯೊಂದು ಮಾತು ಮತ್ತು ಕಾರ್ಯವು ಖಲೀಫರಿಗೆ ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠಾವಂತವಾಗಿತ್ತು ಮತ್ತು ಖಲೀಫರ ಪ್ರತಿಯೊಂದು ಮಾತನ್ನೂ ಅಕ್ಷರದ ಮೂಲಕ ಪಾಲಿಸಲಾಯಿತು, ಅವರು MTA ಟೆಲಿಪೋರ್ಟ್‌ನ ನಿರ್ದೇಶಕರಾಗಿದ್ದರು ಆದರೆ ಯಾವುದೇ ಪ್ರದರ್ಶನವಿರಲಿಲ್ಲ ಮತ್ತು ನಾನು ಈ ಕೆಲಸವನ್ನು ಮಾಡಿದ್ದೇನೆ ಮತ್ತು ಈ ಯಶಸ್ಸು ನನ್ನಿಂದಾಗುತ್ತಿದೆ ಎಂದು. ಅವರು ಅತ್ಯಂತ ವಿನಮ್ರ ಕೆಲಸಗಾರರಾಗಿದ್ದರು ಮತ್ತು ಇತರರಿಗೆ ಮನ್ನಣೆ ನೀಡಿದರು, ಅವರು ತಮ್ಮ ವಖ್ಫ್ ಅನ್ನು ಅತ್ಯಂತ ನಿಷ್ಠೆಯಿಂದ ಪೂರೈಸಿದ್ದಾರೆ ಮತ್ತು ಅಮೇರಿಕಾ ಖಂಡಕ್ಕೆ MTA ಅನ್ನು ತರಲು ತಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡಿದ್ದಾರೆ. ನಾನು ಪ್ರಾಮಾಣಿಕವಾಗಿ ಅರ್ಥಮಾಡಿಕೊಂಡ ಬಗ್ಗೆ ಉತ್ತಮ ಸಲಹೆಯನ್ನು ನೀಡಿದ್ದಾರೆ. ನನಗೂ ಬರೆಯುತ್ತಿದ್ದರು. ಮುಂದೆ ಬಂದು ತನ್ನ ಪ್ರಾಮುಖ್ಯತೆಯನ್ನು ಹೇಳಲು ಅವರು ಇಷ್ಟಪಡಲಿಲ್ಲ. ಖಲೀಫಾ ವಕ್ತ್ ಅವರು ನನಗೆ ಒಪ್ಪಿಸಿದ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಪೂರ್ಣಗೊಳಿಸಲು ನಾನು ಪ್ರಯತ್ನಿಸುತ್ತೇನೆ ಎಂಬುದು ಕೇವಲ ಸಮರ್ಪಣೆಯಾಗಿತ್ತು. ಸರ್ವಶಕ್ತನಾದ ಅಲ್ಲಹನು ಅವರೊಂದಿಗೆ ಮಗ್‌ಫಿರತ್ ಹಾಗೂ ಕರುಣೆಯಿಂದ ವರ್ತಿಸಲಿ ಮತ್ತು ಅವರ ಪದವಿಗಳನ್ನು ಉನ್ನತಿಗೊಳಿಸಲಿ.

ಎರಡನೆಯ ಉಲ್ಲೇಖವು ಮುಕರ್ರಮ್ ಅಬ್ದುಲ್ ರಹಮಾನ್ ಕುಟ್ಟಿ ಸಾಹಿಬ್, ಅಲನಲ್ಲೋರ್, ಕೇರಳ ಅವರದ್ದಾಗಿದೆ.

ಕಳೆದ ಕೆಲ ದಿನಗಳ ಹಿಂದೆ ಅವರೂ ನಿಧನಹೊಂದಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವರು ಮೂಸಿಯಾಗಿದ್ದರು. ಹದಿನಾರನೇ ವಯಸ್ಸಿನಲ್ಲಿ, ಅವರ ತಾಯಿಯ ಚಿಕ್ಕಪ್ಪ ಮೌಲಾನಾ ಮುಹಮ್ಮದ್ ಅಲ್ವಿ ಸಾಹಿಬ್ ಅವರ ಮೂಲಕ ಬೈಅತ್ ಮಾಡಿದರು. ಅವರು ನಮಾಝ್ ಉಪವಾಸ ಅನುಷ್ಠಿಸುವುದರಲ್ಲಿ ಬದ್ಧರಾಗಿದ್ದರು. ಜಮಾಅತಿನೊಂದಿಗೆ ನಿಕಟ ಸಂಬಂಧವಿರಿಸಿದ ಸಾತ್ವಿಕರಾಗಿದ್ದರು. ಅವರ ಪುತ್ರ ಬರೆಯುತ್ತಾರೆ: ಅವರು ನಮ್ಮ ತರಬೇತಿಯಲ್ಲಿ ಧಾರ್ಮಿಕ ಅಂಶಕ್ಕೆ ಆದ್ಯತೆ ನೀಡಿದರು. ಹೀಗೆ ಬೆಳಿಗ್ಗೆ ಶಾಲೆಗೆ ಹೋಗುವ ಮೊದಲು, ಅವರು ನಮ್ಮನ್ನು ಒಂದೆರಡು ಗಂಟೆಗಳ ಕಾಲ ಧಾರ್ಮಿಕ ಮದರಸಕ್ಕೆ ಕಳುಹಿಸುತ್ತಿದ್ದರು. ಮತ್ತು ರಾತ್ರಿ ಮಲಗುವ ಮುನ್ನ ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಿಸುತ್ತಿದ್ದರು.

ಅವರ ಪತ್ನಿ ಮೂರು ವರ್ಷಗಳ ಹಿಂದೆ ನಿಧನ ಹೊಂದಿದರು. ಅವರು ಇಬ್ಬರು ಪುತ್ರಿಯರು ಮತ್ತು ನಾಲ್ವರು ಪುತ್ರರನ್ನು ಅಗಲಿದ್ದಾರೆ. ಅವರ ಪುತ್ರ ಮುಕರ್ರಮ್ ಮೌಲವಿ ಶಮ್‌ಸುದ್ದೀನ್ ಸಾಹಿಬ್ ಕಬಾಬೀರ್‌ನಲ್ಲಿ ಮುಬಲ್ಲಿಗರಾಗಿದ್ದಾರೆ. ಅವರಿಗೆ ಜನಾಝದಲ್ಲಿ ಭಾಗವಹಿಸಲಾಗಲಿಲ್ಲ. ಅಲ್ಲಾಹನು ಅವರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ಮೃತರ ಪದವಿಯನ್ನು ಉನ್ನತಗೊಳಿಸಲಿ ಮತ್ತು ಕರುಣೆ ಹಾಗೂ ಮಗ್ಫಿರತ್ ಅನ್ನು ದಯಪಾಲಿಸಲಿ. ಆಮೀನ್

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್ ಡೈಲಿ, ಜೂನ್ 21, 2024, ಪುಟ 2-6)**

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಈ ಅಪರಾಧಕ್ಕಾಗಿ ಶಿಕ್ಷೆಗೆ ಒಳಗಾಗುತ್ತೀರಿ, ಆದರೆ ಪರಲೋಕದಲ್ಲಿಯೂ ಸಹ ನೀವು ಇನ್ನೂ ಹೆಚ್ಚಿನ ಶಿಕ್ಷೆಗೆ ಒಳಗಾಗುತ್ತೀರಿ ಮತ್ತು ಶಿಕ್ಷೆ ಮತ್ತು ಅವಮಾನವು ತುಂಬಾ ಕಠಿಣವಾಗಿರುತ್ತದೆ ಏಕೆಂದರೆ ಎಲ್ಲಾ ಮಾನವ ಆತ್ಮಗಳನ್ನು ಶಿಕ್ಷಿಸಲಾಗುತ್ತದೆ, ಅವರ ದೇಹಗಳು, ಅವರು ಯಾವುದೇ ಸಮಯದಲ್ಲಿ ಜಗತ್ತಿನಲ್ಲಿದ್ದರೆ, ಅವುಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಪ್ರತಿ ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರ ಜನಾಂಗದ ಬಗ್ಗೆ ಸಾಕ್ಷಿ ಹೇಳಲಾಗುತ್ತದೆ. ಹೀಗಿರುವಾಗ ಆ ಸಮಯದಲ್ಲಿ ತಮಗಾಗುವ ಅವಮಾನದ ಬಗ್ಗೆ ಇವರೇಕೆ ಯೋಚಿಸುವುದಿಲ್ಲ.

ಇನ್ನೊಂದು ಸ್ಥಳದಲ್ಲಿ, ಈ ಅವಮಾನವನ್ನು ಈ ಕೆಳಗಿನ ಪದಗಳಲ್ಲಿ ಉಲ್ಲೇಖಿಸಲಾಗಿದೆ **ಫಕೈಫ ಇಝಾ ಜಿಅ್‌ನ ಮಿನ್ ಕುಲ್ಲಿ ಉಮ್ಮತಿನ್ ಬಿಶಹೀದಿ ವ್ವಜಿಅ್‌ನಾ ಬಿಕ ಅಲಾ ಹಾಉಲಾಇ ಶಹೀದ.... ಯೌಮಿಇಝಿಯ್ಯವದ್ದುಲ್ಲಝೀನ ಕಫರೂ ವ ಅಸಉರ್‌ರಸೂಲ ಲೌ ತುಸವ್ವಾ** ಬಿಹಿಮುಲ್ ಅರ್ಝೂ (ಅನ್ನಿಸಾ) ಅಂದರೆ ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು?....... ಅವಿಶ್ವಾಸವನ್ನು ಹೊಂದಿ ಪ್ರವಾದಿಯನ್ನು ಧಿಕ್ಕರಿಸಿದವರು ಆ ದಿನದಂದು, (ಅಲ್ಲಿ ಹಾಜರಾಗಲು ಸಂದರ್ಭ ಬಾರದೆ) ತಮ್ಮನ್ನು ಭೂಮಿಯಲ್ಲಿ ಹೂಳಿಟ್ಟು ನೆಲಸಮ ಮಾಡಿರುತ್ತಿದ್ದರೆ (ಎಷ್ಟು ಚೆನ್ನಾಗಿರುತಿತ್ತು!) ಎಂದು ಬಯಸುವರು. (ಅಂದು) ಅಲ್ಲಾಹನಿಂದ ಏನನ್ನೂ ಬಚ್ಚಿಡಲು ಅವರಿಗೆ ಸಾಧ್ಯವಿಲ್ಲ.

ಅಲ್ಲಾಹನು ಪ್ರತಿಯೊಂದು ಸಮೂದಾಯಕ್ಕೂ ಒಬ್ಬ ಪ್ರವಾದಿಯನ್ನು ಕಳುಹಿಸಿದ್ದಾನೆ ಎಂಬುದು ಈ ಆಯತ್‌ನಿಂದ ಸಾಬೀತು ಆಗುತ್ತದೆ. ಪವಿತ್ರ ಖುರ್‌ಆನ್ ಈ ನಂಬಿಕೆಯನ್ನು ವಿವಿಧ ಆಯತ್‌ಗಳಲ್ಲಿ ವಿವರಿಸಿದೆ ಮತ್ತು ಇದು ಎಲ್ಲಾ ಇತರ ಧರ್ಮಗಳಿಗಿಂತ ವಿಶಿಷ್ಟವಾಗಿದೆ ಮತ್ತು ಇದು ಅದರ ದೃಢೀಕರಣದ ಪ್ರಬಲ ಪುರಾವೆಗಳಲ್ಲಿ ಒಂದಾಗಿದೆ.

ಅಂದು ಅವಿಶ್ವಾಸಿಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂದು ಹೇಳಿದ್ದಕ್ಕೆ ಕೆಲವರು ಮಾತನಾಡಲು ಅನುಮತಿ ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ಅರ್ಥವು ಸರಿಯಲ್ಲ ಏಕೆಂದರೆ ಪವಿತ್ರ ಖುರ್‌ಆನ್‌ನ ಹಲವಾರು ಆಯತ್‌ಗಳ ಮೂಲಕ ಸತ್ಯವಿಶ್ವಾಸಿಗಳು ತೀರ್ಪಿನ ದಿನದಂದು ಸರ್ವಶಕ್ತನಾದ ಅಲ್ಲಾಹನೊಂದಿಗೆ ಮಾತನಾಡುತ್ತಾರೆ ಮತ್ತು ಅವರ ಕ್ಷಮೆಯನ್ನು ಸಹ ಮಂಡಿಸುತ್ತಾರೆ ಎಂದು ಸಾಬೀತಾಗಿದೆ. ಆದ್ದರಿಂದ **ಲಾ ಯುಝ್ನು** ಎಂದರೆ ಸ್ವರ್ಗಕ್ಕೆ ಪ್ರವೇಶಿಸಲು ಅನುಮತಿ ಅಥವಾ ಮಧ್ಯಸ್ಥಿಕೆ ಎಂದರ್ಥ ಮತ್ತು ಇದರರ್ಥ ಪ್ರವಾದಿಯವರು ತೀರ್ಪಿನ ದಿನದಂದು ಬಂದಾಗ ಅವರು ಸಂಪೂರ್ಣವಾಗಿ ಪರಿಪೂರ್ಣರಲ್ಲದ ತನ್ನ ಜನರ ಗಾಗಿ ಜನರಿಗೆ ಶಿಫಾಅತ್ ವಹಿಸಲು ಅನುಮತಿಸಲಾಗುವುದು, ಆದರೆ ಅವರು ಪ್ರವಾದಿಯನ್ನು ತನ್ನವರೆಂದು ಕರೆಯಲು ಸಾಧ್ಯವಾಗುತ್ತದೆ, ಆ ಸಮಯದಲ್ಲಿ, ಈ ಜನರು ಶಿಫಾಅತ್‌ನಿಂದ ವಂಚಿತರಾಗುತ್ತಾರೆ ಮತ್ತು ಅವರಿಗೆ ಶಿಫಾಅತ್‌ಅನ್ನು ಅನುಮತಿಸಲಾಗುವುದಿಲ್ಲ. ಪವಿತ್ರ ಖುರ್‌ಆನ್ ಮತ್ತು ಹದೀಸ್‌ನಿಂದ ಸಾಬೀತಾಗುವುದೇನೆಂದರೆ ಈ ಶೀಫಾಅತ್ ಅನುಮತಿಯ ಮೂಲಕ ನಡೆಯುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, **ವಲಾ ತನ್‌ಫಉ ಶ್ಶಫಾಅತು ಇಂದಹೂಇಲ್ಲಾ ಲೆಮನ್ ಅಝಿನ ಲಹೂ** (ಸಬಾ: ರುಕು-3), ಅಂದರೆ, ಅಲ್ಲಾಹನು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶೀಫಾರಸೂ ಫಲಕಾರಿಯಾಗದು. ಸೂರಾ ಯೂನಸ್ ರುಕು 1, ತಾಹಾ ರುಕು 6 ಮತ್ತು ಅಲ್-ನಜ್ಮ್ ರುಕು 2 ಮತ್ತು ಸೂರಾ ಬಖರಃ ರುಕು 34 ರಲ್ಲಿ ಸಹ ಉಲ್ಲೇಖಿಸಲಾಗಿದೆ. ಹದೀಸ್‌ನಲ್ಲಿ ಶಿಫಾರಸ್ಸಿನ ಬಗ್ಗೆ ಇಝುನ್ ಎಂಬ ಪದ ಉಪಯೋಗಿಸಲಾಗಿದೆ. ಮುಸ್ನದ್ ಅಹ್ಮದ್ ಹನ್ಬಲ್, ಸಂಪುಟ 5, ಪುಟ 43 ರಲ್ಲಿ ಅಬುಬಕರ್ ಅವರ ವರದಿಯಲ್ಲಿ ಅವರು ಹೀಗೆ ಹೇಳುತ್ತಾರೆ: **ಸುಮ್ಮ ಯುಝ್ನು ಲಿಲ್‌ಮಲಾಇಕತಿ ವನ್ನಬೀಈನ ವಶ್ಶುಹದಾಇ ಅನ್ ಯಶ್‌ಫಉ-** ಅಂದರೆ ನಂತರ ಅಲ್ಲಾಹನು ದೇವದೂತರು, ಪ್ರವಾದಿಗಳು ಮತ್ತು ಹುತಾತ್ಮರಿಗೆ ಶಿಫಾರಸ್ಸು ಮಾಡಲು ಅನುಮತಿಸುತ್ತಾನೆ.

ಈ ಅನುಮತಿಯ ಇನ್ನೊಂದು ಅರ್ಥವನ್ನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆ. ಇದು ಸೂರಾ ಅಲ್-ಮುರ್ಸಲಾತ್‌ನಲ್ಲಿದೆ, **ವಲಾ ಯುಝ್ನು ಲಹುಮ್ ಫಯಅ್‌ತಝಿರೂನ** ಅಂದರೆ ಅವಿಶ್ವಾಸಿಗಳಿಗೆ ಕ್ಷಮೆಯನ್ನು ಪ್ರಸ್ತಾಪಪಡಿಸಲು ಅನುಮತಿಯನ್ನು ನೀಡಲಾಗುವುದಿಲ್ಲ.

ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಪರಿಗಣಿಲಾಗುವುದು ಎಂದು ಹೇಳಲಾಗಿದೆ. ನನ್ನ ಅಭಿಪ್ರಾಯದಲ್ಲಿ ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆಯಾಗಿದೆ, ಅವರು ಅವರ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ, ಅಲ್ಲಾಹನ ವಾಕ್ಯವು ನಮ್ಮ ಮೇಲೆ ಈ ಪರಿಣಾಮವನ್ನು ಬೀರುತ್ತದೆ. ಈ ಬೋಧನೆಯನ್ನು ಸ್ವೀಕರಿಸಿದ ಪರಿಣಾಮವಾಗಿ ನಾವು ಅಲ್ಲಾಹನನ್ನು ಕಂಡುಕೊಂಡೆವು ಮತ್ತು ಎಲ್ಲಿಂದ ಎಲ್ಲಿಗೆ ತಲುಪಿದೆವು. ಈ ರೀತಿಯಾಗಿ, ಸರ್ವಶಕ್ತನಾದ ಅಲ್ಲಾಹನು ಆ ಸಮಯದಲ್ಲಿ ಅವಿಶ್ವಾಸಿಗರನ್ನು ನಾಚಿಕೆ ಪಡಿಸುತ್ತಾನೆ, ನೋಡಿ ನಮ್ಮ ಈ ಪ್ರವಾದಿಯು ಈ ಆಧ್ಯಾತ್ಮಿಕ ಶಕ್ತಿಗಳನ್ನು ಪಡೆದು ಎಲ್ಲಿಂದ ಎಲ್ಲಿಗೆ ತಲುಪಿದನು ಆದರೆ ನೀವು ಆ ಶಕ್ತಿಗಳನ್ನು ನಿರಾಕರಿಸಿ ಎಲ್ಲಿಂದ ಎಲ್ಲಿಗೆ ತಲುಪಿದ್ದೀರಿ.

ಪ್ರತಿಯೊಬ್ಬ ಪ್ರವಾದಿಯು ದೈವಿಕ ಪದದ ಫಲಿತಾಂಶದ ಪ್ರಾಯೋಗಿಕ ಉದಾಹರಣೆಯಾಗಿದೆ, ಅದಕ್ಕಾಗಿಯೇ ಪ್ರವಾದಿಯಿಲ್ಲದೆ ಪದವು ಬರುವುದಿಲ್ಲ. ವಾಕ್ಯದ ಮಹಿಮೆಯು ಪ್ರವಾದಿಯಿಂದ ಮತ್ತು ಪ್ರವಾದಿಯ ಮಹಿಮೆಯು ಪದದಿಂದ ತಿಳಿಯುತ್ತದೆ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-214, ಪ್ರಕಟಿತ 2010 ಖಾದಿಯಾನ್)**

...*...*...*...

*(ಪುಟ ಸಂಖ್ಯೆ 09ರ ಉಳಿದ ಭಾಗ)*

ಈ ವಿಷಯದಲ್ಲಿ ನಾವು ಈ ಹದೀಸ್‌ಗಳನ್ನು ಪರಿಗಣಿಸಿದಾಗ, ಈ ವಸ್ತುಗಳ ನಿಷೇಧದ ಜೊತೆಗೆ, ಬನೀ ಇಸ್ರಾಈಲ್ ರವರು ಯಾವಾಗ ನಾಶವಾದರು ಎಂದರೆ ಅವರ ಮಹಿಳೆಯರು ಅಂತಹ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಾಗ ಎಂದು ಪವಿತ್ರ ಪ್ರವಾದಿ(ಸ) ರವರು ಹೇಳಿದ್ದಾರೆ. ಪ್ರವಾದಿ ಮುಹಮ್ಮದ್(ಸ) ಅವರ ಆಗಮನದ ಸಮಯದಲ್ಲಿ, ಯಹೂದಿಗಳಲ್ಲಿ ಅಶ್ಲೀಲತೆಯು ಸಾಮಾನ್ಯವಾಗಿತ್ತು ಮತ್ತು ಮದೀನಾದಲ್ಲಿ ಅನೇಕ ವೇಶ್ಯಾಗೃಹಗಳು ಇದ್ದವು, ಅದರಲ್ಲಿ ತೊಡಗಿರುವ ಮಹಿಳೆಯರು ಪುರುಷರನ್ನು ಆಕರ್ಷಿಸಲು ಇಂತಹ ತಂತ್ರಗಳನ್ನು ಬಳಸಿದರು, ಆದ್ದರಿಂದ ಪ್ರವಾದಿ(ಸ) ರವರು ಈ ಕೃತ್ಯಗಳನ್ನು ಖಂಡಿಸಿ ಆ ಸಮಯದಲ್ಲಿ ಮುಮಿನರಿಗೆ ಹಾಗೆ ಮಾಡುವುದರಿಂದ ನಿಷೇಧಿಸಿದರು.

ಆದ್ದರಿಂದ, ಈ ವಸ್ತುಗಳ ನಿಷೇಧದಲ್ಲಿ, ಅವುಗಳ ಪರಿಣಾಮವಾಗಿ, ಮನುಷ್ಯನ ದೈಹಿಕ ಸ್ಥಿತಿಯಲ್ಲಿ ಅಂತಹ ಕೃತಕ ಬದಲಾವಣೆಯು ಸಂಭವಿಸಿದರೆ, ಪುರುಷ ಮತ್ತು ಮಹಿಳೆಯ ನಡುವಿನ ವ್ಯತ್ಯಾಸವನ್ನು ಸರ್ವಶಕ್ತನಾದ ಅಲ್ಲಾಹನು ಮಾನವರಲ್ಲಿ ಸೃಷ್ಟಿಸಿದ ವ್ಯತ್ಯಾಸವು ಕೊನಡಗೊಳ್ಳುತ್ತದೆ ಅಥವಾ ಈ ರೀತಿಯ ಕೃತ್ಯದಿಂದ ಅತೀ ದೊಡ್ಡ ಪಾಪವಾದ ಶಿರ್ಕ್‌ನ ಕಡೆಗೆ ಪ್ರಚೋದನೆಯ ಭಯವಿದ್ದರೆ ಅಥವಾ ಈ ರೀತಿಯ ಕೃತ್ಯದಿಂದ ತನ್ನ ಕಡೆಗೆ ವಿರುದ್ಧ ಲಿಂಗವನ್ನು ಪ್ರಚೋದಿಸುವ ಸಲುವಾಗಿ ನಡೆಸಿದರೆ, ಆಗ ಈ ಎಲ್ಲಾ ಕ್ರಿಯೆಗಳು ಕಾನೂನುಬಾಹಿರ ಮತ್ತು ದೋಷಾರೋಪಣೆಗೆ ಅರ್ಹವೆಂದು ಘೋಷಿಸಲಾಗುವುದು.

ಹಾಗಾಗಿ, ಹಚ್ಚೆ (Tatto) ಹಾಕಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಅದು ಪುರುಷನಾಗಿರಲಿ ಅಥವಾ ಮಹಿಳೆಯಾಗಿರಲಿ, ಅದರ ಹಿಂದಿರುವ ಏಕೈಕ ಉದ್ದೇಶವೆಂದರೆ ಅದನ್ನು ಪ್ರದರ್ಶಿಸುವುದು ಮತ್ತು ವಿರುದ್ಧ ಲಿಂಗವನ್ನು ನಿಮ್ಮ ಕಡೆಗೆ ಅನ್ಯಾಯವಾಗಿ ಆಕರ್ಷಿಸುವುದಾಗಿತ್ತದೆ. ಅದಕ್ಕಾಗಿಯೇ ಜನರು ಸಾಮಾನ್ಯವಾಗಿ ದೇಹದ ಭಾಗಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ, ಅದನ್ನು ಅವರು ಸಾರ್ವಜನಿಕವಾಗಿ ಬಹಿರಂಗಪಡಿಸಬಹುದು. ಆದರೆ ಯಾರಾದರು ದೇಹದ ಗುಪ್ತ ಭಾಗದ ಮೇಲೆ ಯಾರಾದರೂ ಹಚ್ಚೆ ಹಾಕಿಸಿಕೊಂಡರೆ ಅದರ ಹಿಂದೆಯೂ ಅದೇ ಆಲೋಚನೆ ಇರುತ್ತದೆ ಅಂದರೆ ಇದರಿಂದ ಕೆಟ್ಟ ಕಾರ್ಯಗಳು ಮಾಡಿದರೆ, ಈ ಗುಪ್ತ ಭಾಗಗಳಲ್ಲಿ ಮಾಡಿದ ಹಚ್ಚೆಯನ್ನು ವಿರುದ್ಧ ಲಿಂಗದ ಮುಂದೆ ಪ್ರದರ್ಶಿಸಬಹುದು ಎಂದಾಗಿರುತ್ತದೆ. ಈ ಎರಡೂ ವಿಧಾನಗಳು ಕಾನೂನುಬಾಹಿರವಾಗಿವೆ ಏಕೆಂದರೆ ಅವು ಇಸ್ಲಾಮಿಕ್ ಬೋಧನೆಗಳಿಗೆ ವಿರುದ್ಧವಾಗಿವೆ.

ಇದಲ್ಲದೆ, ಹಚ್ಚೆಗಳು ಅನೇಕ ದೈಹಿಕ ಮತ್ತು ವೈದ್ಯಕೀಯ ಅನಾನುಕೂಲಗಳನ್ನು ಹೊಂದಿವೆ. ಆದ್ದರಿಂದ, ಹಚ್ಚೆ ಹಾಕಿದ ದೇಹದ ಭಾಗಗಳಲ್ಲಿ ಚರ್ಮದ ಅಡಿಯಲ್ಲಿ ಬೆವರು ಗ್ರಂಥಿಗಳು ಕೆಟ್ಟದಾಗಿ ಪರಿಣಾಮ ಬೀರುತ್ತವೆ ಮತ್ತು ಹಚ್ಚೆ ಹಾಕಿದ ನಂತರ, ದೇಹದ ಆ ಭಾಗಗಳಲ್ಲಿ ಬೆವರು ಕಡಿಮೆಯಾಗುತ್ತದೆ, ಇದು ವೈದ್ಯಕೀಯವಾಗಿ ಹಾನಿಕಾರಕವಾಗಿದೆ. ಅಂತೆಯೇ, ಕೆಲವು ರೀತಿಯ ಟ್ಯಾಟೂಗಳು ದೇಹದ ಶಾಶ್ವತ ಅಂಗವಾಗುವುದರಿಂದ, ದೇಹವು ಬೆಳೆದಂತೆ ಅಥವಾ ಕುಗ್ಗಿದಾಗ ಟ್ಯಾಟೂವಿನ ಆಕಾರವು ಸಹ ಬದಲಾಗುತ್ತದೆ, ಟ್ಯಾಟೂವು ಒಳ್ಳೆಯದಕ್ಕಿಂತ ಕೊಳಕು ಎಂದು ತೋರುತ್ತದೆ, ಕೆಲವು ವ್ಯಕ್ತಿಗ:ಳು ಅದನ್ನು ಬಹಳ ಕೆಟ್ಟದ್ದು ಎಂದು ಭಾವಿಸುತ್ತಾರೆ ಆದರೆ ಅದನ್ನು ತೊಡೆದುಹಾಕುವುದು ಸಾಧ್ಯವಿಲ್ಲ. ಆದ್ದರಿಂದ, ಈ ಕಾರಣಗಳಿಂದಾಗಿ ಹಚ್ಚೆ ಹಾಕಿಸಿಕೊಳ್ಳುವುದು ಒಂದು ವ್ಯರ್ಥ ಕೆಲಸವಾಗಿದೆ.

ಉಳಿದಂತೆ, ತಮ್ಮ ಕಾನೂನುಬದ್ಧ ಮತ್ತು ಇಸ್ಲಾಮಿಕ್ ಮಿತಿಗಳಲ್ಲಿ ವಾಸಿಸುವ ಮಹಿಳೆಯರ ಹುಬ್ಬುಗಳಿಗೆ ಸಂಬಂಧಿಸಿದಂತೆ, ಈ ದುಷ್ಕೃತ್ಯಗಳ ಹಿನ್ನೆಲೆಯಲ್ಲಿ ಮುಮಿನ್ ಮಹಿಳೆಯರು ಈ ಕೆಲಸಗಳನ್ನು ಮಾಡುವುದನ್ನು ಪ್ರವಾದಿ(ಸ) ನಿಷೇಧಿಸಿದರು. ಆದರೆ ನೋವು ಅಥವಾ ಅನಾರೋಗ್ಯದ ಕಾರಣದಿಂದ  ವಿನಾಯಿತಿಯನ್ನು ನೀಡಿದ್ದಾರೆ. ಆದ್ದರಿಂದ, ಹಝ್ರತ್ ಅಬ್ದುಲ್ಲಾ ಬಿನ್ ಮಸೂದ್(ರ) ಅವರಿಂದ ವರದಿಯಾಗಿದೆ **ಸಮಿಅ್‌ತು ರಸೂಲಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ನಹಾ ಅನ್ನಾಮಿಸತಿ ವಲ್‌ವಾಶಿರತಿ ವಲ್‌ವಾಸಿಲತಿ ವಲ್‌ವಾಶಿಮತಿ ಇಲ್ಲಾ ಮಿನ್ ದಾಇನ್** (ಮಸ್ನದ್ ಅಹ್ಮದ್ ಬಿನ್ ಹಂಬಲ್) ಅಂದರೆ ನಾನು ಪ್ರವಾದಿ(ಸ) ಅವರು ಕೂದಲು ಕೀಳುವ ಸಾಧನೆಯಿಂದ ಕೂದಲುಗಳನ್ನು ಕೀಳುವವರು, ಹಲ್ಲುಗಳನ್ನು ಹಿರಿತಗೊಳಿಸುವವರು, ಕೃತಕ ಕೂದಲುಗಳನ್ನು ಹಾಕಿಕೊಳ್ಳುವುದು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳಲು ನಿಷೇಧಗೊಳಿಸುವುದನ್ನು ನಾನು ಕೇಳಿದೆ. ಆದರೆ ಯಾವುದಾದರು ಕಾಯಿಲೆ ಇದ್ದಲ್ಲಿ ಅದನ್ನು ಅನುಮತಿಸಲಾಗಿದೆ.

ಇಸ್ಲಾಂ ನಿಯ್ಯತ್ತುಗಳ ಮೇಲೆ ಕ್ರಿಯೆಗಳ ಔಷಧವನ್ನು ಇರಿಸಿದೆ. ಆದ್ದರಿಂದ, ಈ ಯುಗದಲ್ಲಿ, ಮಹಿಳೆಯರು ಕಾನೂನುಬದ್ಧ ರೀತಿಯಲ್ಲಿ ಮತ್ತು ನ್ಯಾಯಸಮ್ಮತ ಉದ್ದೇಶಕ್ಕಾಗಿ ಈ ವಸ್ತುಗಳ ಲಾಭವನ್ನು ಪಡೆದರೆ, ಇದರಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ ಈ ಕ್ರಿಯೆಗಳ ಪರಿಣಾಮವಾಗಿ ದುಷ್ಟತನದ ಕಡೆಗೆ ಒಲವು ಕಂಡುಬಂದರೆ, ಬಹುದೇವತಾ ಆಚರಣೆಯ ಅಭಿವ್ಯಕ್ತಿಯಾದರೆ ಅಥವಾ ಇಸ್ಲಾಂನ ಸ್ಪಷ್ಟ ಆದೇಶಕ್ಕೆ ಅವಿಧೇಯತೆಯನ್ನು ಕಂಡರೆ, ಉದಾಹರಣೆಗೆ, ಈ ಯುಗದಲ್ಲಿಯೂ ಸಹ, ಮಹಿಳೆಯರು ತಮ್ಮನ್ನು ಸ್ವಚ್ಛಗೊಳಿಸುವಾಗ ಅಥವಾ ವ್ಯಾಕ್ಸಿಂಗ್ ಮಾಡುವಾಗ ಮುಸುಕು ಧರಿಸದಿದ್ದರೆ ಮತ್ತು ಅನ್ಯ ಮಹಿಳೆಯರ ಮುಂದೆ ಅವರ ಅಶ್ಲೀಲತೆ ಬಹಿರಂಗಪಡಿಸಿದರೆ, ಈ ಕೆಲಸವನ್ನು ಪವಿತ್ರ ಪ್ರವಾದಿ(ರ)ರವರ ಅದೇ ಎಚ್ಚರಿಕೆಯ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಮತ್ತು ಇದನ್ನು ಅನುಮತಿಸಲಾಗುವುದಿಲ್ಲ.

ಅದೇ ರೀತಿ, ಈ ಸಂದರ್ಭದಲ್ಲಿ, ಕಿಡಿಗೇಡಿತನವನ್ನು ಕೊಲೆಗಿಂತ ದೊಡ್ಡ ಪಾಪವೆಂದು ಘೋಷಿಸುವ ಮೂಲಕ ಕಿಡಿಗೇಡಿತನವನ್ನು ನಿಲ್ಲಿಸಲು ಸರ್ವಶಕ್ತನಾದ ಅಲ್ಲಾಹನು ಆದೇಶಿಸಿದ್ದಾನೆ ಎಂಬುದನ್ನು ಸಹ ನೆನಪಿನಲ್ಲಿಡಬೇಕು. ಮತ್ತು ಕೆಲವು ಉದಾಹಣೆಗಳು ಕಂಡುಬರುವುದೇನೆಂದರೆ ಮದುವೆಯ ನಂತರ ಸಂಬಂಧಗಳು ಕೊನೆಗೊಂಡ ಅಥವಾ ವಿಚ್ಛೇದನಗಳು ನಡೆದಿವೆ ಅದಕ್ಕೆ ಕಾರಣ ಗಂಡನಿಗೆ ಹೆಂಡತಿಯ ಮುಖದ ಮೇಲೆ ಕೂದಲು ಇವೆ ಎಂದು ನಂತರ ತಿಳಿದುಬಂತು. ಕೆಲವು ಕೂದಲನ್ನು ಸ್ವಚ್ಛಗೊಳಿಸದಿದ್ದರೆ ಅಥವಾ ಎಳೆಯದಿದ್ದರೆ, ಅದು ಹೆಚ್ಚು ಮನೆಗಳನ್ನು ಹಾಳುಮಾಡುತ್ತದೆ. ಇಷ್ಟವಿಲ್ಲದಿರುವಿಕೆಗಳ ದೀರ್ಘ ಸರಣಿ ಪ್ರಾರಂಭವಾಗುತ್ತದೆ. ಮತ್ತು ಈ ಆಜ್ಞೆಯೊಂದಿಗೆ ಪವಿತ್ರ ಪ್ರವಾದಿ(ಸ) ಅವರ ಉದ್ದೇಶವು ಸಮಾಜದಲ್ಲಿ ಅಂತಹ ಪರಿಸ್ಥಿತಿ ಉಂಟಾಗುತ್ತದೆ, ಇದರ ಪರಿಣಾಮವಾಗಿ ಮನೆಗಳಲ್ಲಿ ಗಲಭೆಗಳು ಹರಡುತ್ತವೆ ಎಂದು ಹೇಳಲಾಗುವುದಿಲ್ಲ. ಇಂತಹ ಕಟುವಾದ ಮಾತುಗಳನ್ನು ಹೇಳುವುದರಲ್ಲಿ ಕಾಣುವ ಜಾಣತನವೇನೆಂದರೆ ಬಹುದೇವಾರಾಧನೆಯು ಮಹಾಪಾಪವಾಗಿದೆ ಮತ್ತು ಈ ಮಾತುಗಳನ್ನು ದೇವಾನುದೇವತೆಗಳು ಇತ್ಯಾದಿಗಳ ಸಲುವಾಗಿ ತೆಗೆದುಕೊಂಡಿರುವದರಿಂದ ಅಥವಾ ಅಶ್ಲೀಲತೆಯು ಪ್ರಚುರಪಡಿಸಲ್ಪಟ್ಟುದರಿಂದ ನೀವು(ಸ)ರವರು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದರೊಂದಿಗೆ ಬಲವಾದ ಪದಗಳಲ್ಲಿ ಖಂಡಿಸಿದ್ದಾರೆ ಹೀಗೆ ಬಹುದೇವತಾ ಪದ್ಧತಿಗಳು ಮತ್ತು ಅಶ್ಲೀಲತೆಯನ್ನು ಖಂಡಿಸಿದ್ದಾರೆ.

**(ಮುಂದುವರಿಯುವುದು)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

**ಈದ್ ಮತ್ತು ಜುಮುಅ ಒಂದೇ ದಿನ ಬಂದರೆ, ಅದರ ಬಗ್ಗೆ**

ಪ್ರವಾದಿ ಮುಹಮ್ಮದ್(ಸ)ರ ಸುನ್ನತ್ ಮತ್ತು ಖಿಲಫಾ ಎ ರಾಶಿದೀನ್ ಹಾಗೂ ಪ್ರವಾದಿ(ಸ) ಅವರ ಸಹಾಬರವರ ನಂಬಿಕೆಯು ಹೀಗಿತ್ತು ಅಂದರೆ ಅವರೆಲ್ಲರೂ ಅಂದು ಈದ್ ನಮಾಝ್ ನಿರ್ವಹಿಸಿದ ನಂತರ ಜುಮುಅದ ನಮಾಝನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿದರು.

ಹಾಗೂ ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದ ನಮಾಝಿನಲ್ಲಿ ಬಿಡುವು ನೀಡಿ, ಅವರವರ ಪ್ರದೇಶದಲ್ಲೇ ಝುಹರ್ ನಮಾಝನ್ನು ನಿರ್ವಹಿಸುವಂತೆ ಸೂಚನೆ ನೀಡಿದರು.

**ಆದ್ದರಿಂದ, ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝ್ ನಿರ್ವಹಿಸಿದ ನಂತರ ಒಂದು ವೇಳೆ ಜುಮುಅ ನಮಾಝ್ ನಿರ್ವಹಿಸದಿದ್ದರೆ ಝುಹರ್ ನಮಾಝನ್ನು ಅದರ ಸಮಯದಲ್ಲಿ ನಿರ್ವಹಿಸಬೇಕು.**

---

ನಮಾಝ್ ಮತ್ತು ಉಪವಾಸವು ಆರಾಧನೆಯ ಭೌತಿಕ ಕ್ರಿಯೆಗಳಾಗಿವೆ, ಆದ್ದರಿಂದ ಅವರ ಪ್ರತಿಫಲವು ಈ ಆರಾಧನೆಯ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ.

ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ

ಆದಾಗ್ಯೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವನ್ನು ನೀಡುವ ಏನನ್ನಾದರೂ ಕೆಲಸ ಮಾಡಿದರೆ ಅದು ಸದಖ ಜಾರಿಯ ಎಂದು ಪರಿಗಣಿಸಲಾಗುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

ಹದೀಸ್ ಗ್ರಂಥಗಳಲ್ಲಿ, ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಸತ್ತವರ ಪರವಾಗಿ ಉಪವಾಸ ಮಾಡ ಬೇಡಿ ಎಂಬ ವರದಿಗಳು ದೊರೆಯುತ್ತದೆ ಆದರೆ ಅವರ ಪರವಾಗಿ ಆಹಾರ ತಿನ್ನಿಸಿರಿ ಎಂಬ ಉಲ್ಲೇಖಗಳಿವೆ.

## ಸಯ್ಯಿದುನಾ ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ವಿಶ್ವಾಸ ವರ್ಧಕ ಉತ್ತರಗಳ

**ಗಮನಿಸಿ:** ಸಯ್ಯಿದುನಾ ಹಝ್ರತ್ ಅಮೀರಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ವಿವಿಧ ಸಂದರ್ಭಗಳಲ್ಲಿ ಪತ್ರಗಳಲ್ಲಿ ಹಾಗೂ ಎಂ.ಟಿ.ಎ ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಬಗ್ಗೆ ಕೇಳಲಾದ ಪ್ರಶ್ನೆಗಳ ಬಗ್ಗೆ ನೀಡಿದ ಮಾರ್ಗದರ್ಶನ ಹಾಗೂ ಉತ್ತರಗಳನ್ನು ಓದುಗರ ಅನುಕೂಲಕ್ಕಾಗಿ ಅಲ್-ಫ಼ಜಲ್ ಇಂಟರ್ನ್ಯಾಷನಲ್‌ಗೆ ಧನ್ಯವಾದಗಳೊಂದಿಗೆ ಪ್ರಕಟಿಸಲಾಗುತ್ತಿದೆ. (ಸಂಸ್ಥೆ)

**ಪ್ರಶ್ನೆ:** ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಅರಬ್ ಮಹಿಳೆಯೊಬ್ಬರು ಬರೆದಿದ್ದಾರೆ, ಮಹಿಳೆಯರಿಗೆ ಹುಬ್ಬು ಮತ್ತು ದೇಹದ ಮೇಲೆ ಹಚ್ಚೆ ಹಾಕುವ ವ್ಯವಹಾರವನ್ನು ಮಾಡಲು ಅನುಮತಿ ಇದೆಯೇ? ಎಂದು ಅವರಿಗೆ ಮಹಿಳೆಯೊಬ್ಬರು ಕೇಳಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಅವರು 27ನೇ ಏಪ್ರಿಲ್ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ:

**ಉತ್ತರ:** ಹುಬ್ಬು ಹಾಗೂ ಹಚ್ಚೆ ಹಾಕುವುದನ್ನು ಅನುಮತಿಸಲಾಗುವುದಿಲ್ಲ. ಹದೀಸ್‌ಗಳಲ್ಲಿಯೂ ಇದನ್ನು ನಿಷೇಧಿಸಲಾಗಿದೆ, ಸರ್ವಶಕ್ತನಾದ ಅಲ್ಲಾಹನು ಸೌಂದರ್ಯಕ್ಕಾಗಿ ದೇಹವನ್ನು (tatto) ಚುಚ್ಚುವವರನ್ನು, ಚುಚ್ಚಿಸಿಕೊಳ್ಳುವವರನ್ನು, ಮುಖದ ಮೇಲಿನ ಕೂದಲುಗಳನ್ನು ಪರಚಿಕೊಳ್ಳುವವರನ್ನು, ಮುಂಭಾಗದ ಹಲ್ಲುಗಳಲ್ಲಿ ಅಂತರವನ್ನು ಉಂಟುಮಾಡುವವರನ್ನು ಮತ್ತು ಕೂದಲುಗಳಲ್ಲಿ ತೇಪೆ ಹಾಕಿಸಿಕೊಳ್ಳುವವರು ಹಾಗೂ ತೇಪೆ ಹಾಕುವವರರನ್ನು ಅಲ್ಲಾಹನು ಶಪಿಸಿದ್ದಾನೆ ಅವರು ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಸೃಷ್ಟಿಸುತ್ತಾರೆ. (ಸಹೀಹ್ ಬುಖಾರಿ ಕಿತಾಬ್ ಅಲ್-ಲಿಬಾಸ್)

ಇಸ್ಲಾಮಿನ ಪ್ರತಿಯೊಂದು ಆಜ್ಞೆಗಳು ಕೆಲವು ಬುದ್ಧಿವಂತಿಕೆಯನ್ನು ಹೊಂದಿದೆ. ಅಂತೆಯೇ, ಕೆಲವು ಇಸ್ಲಾಮಿಕ್ ಆದೇಶಗಳು ನಿರ್ದಿಷ್ಟ ಹಿನ್ನೆಲೆಯನ್ನು ಹೊಂದಿವೆ, ಈ ಆದೇಶಗಳನ್ನು ಈ ಹಿನ್ನೆಲೆಯ ಹೊರಗೆ ನೋಡಿದರೆ, ಆದೇಶದ ಆಕಾರವು ಬದಲಾಗುತ್ತದೆ. ಪ್ರವಾದಿ(ಸ) ರವರು ಆಗಮಿಸಿದಾಗ, ಜಗತ್ತಿನಲ್ಲಿ ಮತ್ತು ವಿಶೇಷವಾಗಿ ಅರೇಬಿಯನ್ ಪರ್ಯಾಯ ದ್ವೀಪದಲ್ಲಿ, ವಿವಿಧ ರೀತಿಯ ಬಹುದೇವತಾವಾದದ ವಿಷವು ಎಲ್ಲೆಡೆ ಹರಡಿತು, ಮಾನವೀಯತೆಯನ್ನು ಹಿಡಿದಿಟ್ಟುಕೊಳ್ಳುವ ವಿವಿಧ ರೀತಿಯ ತಪ್ಪುಗಳು ಮತ್ತು ಮಹಿಳೆಯರು ಮತ್ತು ಪುರುಷರು ವಿಭಿನ್ನವಾದ ಬಹುದೇವಾರಾಧನೆಯಲ್ಲಿ ತೊಡಗಿದ್ದರು.

ಮೇಲೆ ತಿಳಿಸಿದ ವಿಷಯಗಳ ನಿಷೇಧದ ಆಧಾರದ ಮೇಲೆ ಹದೀಸ್‌ಗಳಲ್ಲಿ ಎರಡು ವಿಷಯಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ಒಂದು ಅವುಗಳ ಫಲವಾಗಿ ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಉದ್ದೇಶಿಸಲಾಗಿದೆ ಮತ್ತು ಇನ್ನೊಂದು ಸೌಂದರ್ಯವನ್ನು ಸಾಧಿಸುವುದು.

ಈ ಎರಡು ವಿಷಯಗಳನ್ನು ನಾವು ಪರಿಗಣಿಸಿದಾಗ, ಮೊದಲನೆಯದು, ಅಂದರೆ ಅಲ್ಲಾಹನ ಸೃಷ್ಟಿಯಲ್ಲಿನ ಬದಲಾವಣೆ, ಅಲ್ಲಿ ಅದು ಸಾಮಾಜಿಕ ಅನಿಷ್ಟಗಳನ್ನು ಸೂಚಿಸುತ್ತದೆ, ಇದು ಬಹುದೇವತಾ ಕ್ರಿಯೆಗಳನ್ನು ಸಹ ಪ್ರತಿಬಿಂಬಿಸುತ್ತದೆ. ಇದನ್ನು ಹಿರಿತನದ ಸಂಕೇತವಾಗಿ ತೆಗೆದುಕೊಳ್ಳುತ್ತದೆ, ಕೂದಲಲ್ಲಿ ಉದ್ದವಾದ ತೇಪೆಗಳನ್ನು ಹಾಕಿ ತಲೆಯ ಮೇಲೆ ಕೂದಲ ಪಗಡಿಯನ್ನಾಗಿ ಇರಿಸಿ ಅದನ್ನು ಹಿರಿತನದ ಚಿಹ್ನೆಯನ್ನಾಗಿ ಹೇಳುವುದು, ಯಾವುದಾದರು ಪೀರ್ ಅಥವಾ ಗುರುವಿಗಾಗಿ ಕೂದಲನ್ನು ಅರ್ಪಿಸಿ ಅದನ್ನು ಜಡೆ ಮಾಡುವುದು ಅಥವಾ ಬೋದಿಯನ್ನು ಅರ್ಪಣೆಯಾಗಿ ಇಡುವುದು, ಕೂದಲನ್ನು ನಾಲ್ಕು ಭಾಗಗಳಾಗಿ ಕತ್ತರಿಸಿ ಮಧ್ಯದಲ್ಲಿ ರೇಜರ್‌ನಿಂದ ಬೋಳಿಸಿಕೊಂಡು ಅದನ್ನು ಆಶೀರ್ವಾದವೆಂದು ಪರಿಗಣಿಸುತ್ತಾರೆ. ಅದೇ ರೀತಿಯಲ್ಲಿ, ಅನುಗ್ರಹಕ್ಕಾಗಿ ದೇಹ, ಮುಖ ಮತ್ತು ತೋಳು ಇತ್ಯಾದಿಗಳ ಮೇಲೆ ದೇವತೆ, ವಿಗ್ರಹ ಅಥವಾ ಪ್ರಾಣಿಯ ಆಕಾರವನ್ನು ಚುಚ್ಚಿಸಿಕೊಳ್ಳುವುದು. ಇವೆಲ್ಲ ಬಹುದೇವತಾ ವಿಧಾನಗಳಾಗಿದ್ದು ಅವುಗಳ ಹಿಂದೆ ಧಾರ್ಮಿಕ ಮೂಢನಂಬಿಕೆಗಳಿದ್ದವು.

ಎರಡನೆಯದಾಗಿ, ಸೌಂದರ್ಯಕ್ಕಾಗಿ ಇದನ್ನು ಮಾಡುವುದು, ಕೆಲವು ವಿಷಯಗಳಲ್ಲಿ, ಸಾಮಾಜಿಕ ಅನೈತಿಕತೆ ಮತ್ತು ಅಶ್ಲೀಲತೆಯನ್ನು ತೋರಿಸುತ್ತದೆ. ಕಾನೂನುಬದ್ಧ ಮಿತಿಯೊಳಗೆ ವಾಸಿಸುವಾಗ ಒಬ್ಬ ವ್ಯಕ್ತಿಯು ತನ್ನ ಸೌಂದರ್ಯಕ್ಕಾಗಿ ಯಾವುದೇ ಕಾನೂನುಬದ್ಧ ವಿಧಾನವನ್ನು ಅಳವಡಿಸಿಕೊಳ್ಳುವುದನ್ನು ನಿಷೇಧಿಸಲಾಗಿಲ್ಲ. ಆದ್ದರಿಂದ, ಒಂದು ಹದೀಸಿನಲ್ಲಿ ಒಬ್ಬ ವ್ಯಕ್ತಿಯು ಹೇಳಿದನು ನನಗೆ ಚೆನ್ನಾಗಿ ಕಾಣುವುದು ಮತ್ತು ನಾನು ಬಯಸುವುದೇನೆಂದರೆ ನನ್ನ ಬಟ್ಟೆ ಚೆನ್ನಾಗಿರಲಿ, ನನ್ನ ಬೂಟುಗಳು ಚೆನ್ನಾಗಿರಲಿ, ಇದು ಅಹಾಂಕಾರದಲ್ಲಿ ಸೇರಿದೆಯೇ? ಅದಕ್ಕೆ ಪ್ರವಾದಿ(ಸ) ನುಡಿದರು: "ಇದು ಅಹಂಕಾರವಲ್ಲ." ಸತ್ಯವನ್ನು ನಿರಾಕರಿಸುವ ಮತ್ತು ಇತರರನ್ನು ಧಿಕ್ಕರಿಸುವ ಹೆಸರೇ ಅಹಂಕಾರವಾಗಿದೆ. ಮತ್ತು ಇದರೊಂದಿಗೆ, ಪವಿತ್ರ ಪ್ರವಾದಿ(ಸ) ನುಡಿದರು **ಇನ್ನಲ್ಲಾಹ ಜಮೀಲುನ್ ಯುಹಿಬ್ಬುಲ್ ಜಮಾಲ** ಅಂದರೆ ಅಲ್ಲಾಹನು ಸುಂದರ ಮತ್ತು ಸೌಂದರ್ಯವನ್ನು ಪ್ರೀತಿಸುತ್ತಾನೆ. (ಸಹೀಹ್ ಮುಸ್ಲಿಂ, ಕಿತಾಬುಲ್ ಈಮಾನ್, ಅಧ್ಯಾಯ ತಹ್ರೀಮ್ ಅಲ್-ಕಿಬ್ರ್ ವ ಬಯಾನಿಹಿ) ಹಾಗೆಯೇ, ಹದೀಸ್‌ಗಳಲ್ಲಿ ಹುಡುಗಿಯರನ್ನು ಮದುವೆಯಾಗುವಾಗ, ಆ ಕಾಲದ ವಿಧಾನಗಳ ಪ್ರಕಾರ ಅವರನ್ನೂ ಅಲಂಕರಿಸಿ ಸುಂದರಗೊಳಿಸಲಾಯಿತು ಎಂದು ಉಲ್ಲೇಖಿಸಲಾಗಿದೆ. (ಸಹೀಹ್ ಅಲ್-ಬುಖಾರಿಮ, ಕಿತಾಬ್ ಅಲ್-ಹಿಬ್ಬಾ ವಾ ಫದ್ಲಾಹಾ ವಾ ಅಲ್-ತಹ್ರಿದ್ ಅಲ್-ಅಲಿಹಾ ಅಧ್ಯಾಯ ಅಲ್‌ಇಸ್ತಿಯಾರ ಲಿಲ್‌ಉರೂಸ್ ಇಂದಲ್ ಬಿನಾ) (ಫತ್‌ಹಲ್ ಬಾರಿ ಶರಹ್ ಸಹೀಹ್ ಬುಖಾರಿ, ಇತಾಬುನ್ನಿಕಾಹ್)

ಆದ್ದರಿಂದ, ಯಾವ ಸೌಂದರ್ಯವನ್ನು ಸಾಧಿಸುವುದಕ್ಕೆ ಪವಿತ್ರ ಪ್ರವಾದಿ(ಸ) ರವರು ಶಾಪದ ರೀತಿಯಲ್ಲಿ ಎಚ್ಚರಿಸಿದಾಗ, ಅದರ ಬಗ್ಗೆ ಖಂಡಿತವಾಗಿಯೂ ಇನ್ನೊಂದು ಅರ್ಥವನ್ನು ಹೊಂದಿರುತ್ತದೆ. ಆದ್ದರಿಂದ,

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

(ಪುಟ ಸಂಖ್ಯೆ 12ರ ಉಳಿದ ಭಾಗ)

ಜರ್ಮನಿಯ Speyer ಜಮಾಅತ್‌ನಿಂದ ಬಂದಿದ್ದರು ಹೇಳುತ್ತಾರೆ. ಇದು ನನ್ನ ಮೊದಲನೆಯ ಭೇಟಿಯಾಗಿತ್ತು. ನಾನು ಒಳಗೆ ಪ್ರವೇಶಿಸುತ್ತಲೇ ನನ್ನ ಹೃದಯಬಡಿತ ಹೆಚ್ಚಾಯಿತು, ನನ್ನಿಂದ ಏನೂ ಮಾತನಾಡಲು ಸಾಧ್ಯವಗಲಿಲ್ಲ, ನನಗೆ ಏನೂ ಹೇಳಲಾಗುತ್ತಿರಲಿಲ್ಲ. ಹುಝೂರೆ ಅನ್ವರ್(ಅಬಿಅ) ಪ್ರೀತಿಯಿಂದ ನನಗೆ ಉಡುಗೊರೆಯನ್ನು ನೀಡಿದರು.

ಮಿತ್ರರೊಬ್ಬರು ಮುಹಮ್ಮದ್ ವಸೀಮ್ ಸಾಹಿಬ್ ಯುಕ್ರೇನ್ ದೇಶದಿಂದ ಆಗಮಿಸಿದ್ದರು, ಅದು ಅವರ ಜೀವನದ ಮೊದಲನೆಯ ಭೇಟಿಯಾಗಿತ್ತು. ಅವರು ಹೇಳುತ್ತಾರೆ: ನನಗೆ ವಿವರಣೆ ನೀಡಲು ಸಾಧ್ಯವಿಲ್ಲ, ನನ್ನ ಹೃದಯ ಬಡಿತ ಜೊರಾಗುತ್ತಿತ್ತು, ಹುಝೂರೆ ಅನ್ವರ್(ಅಬಿಅ) ಅವರಿಗೆ ನೋಡುತ್ತಲೇ ಅಳು ಬರುತ್ತಿತ್ತು. ನನಗೆ ಮಾತನಾಡಲು ಆಗುತ್ತಿರಲಿಲ್ಲ.

ಭೇಟಿಯ ಈ ಕಾರ್ಯಕ್ರಮ 1 ಗಂಟೆ 40 ನಿಮಿಷದವರೆಗೆ ಜಾರಿಯಲ್ಲಿತ್ತು. ಅನಂತರ ಹುಝೂರ್ ತಮ್ಮ ವಸತಿಯತ್ತ ತೆರಳಿದರು.

**ನಮಾಝ್ ಜನಾಝ ನಿರ್ವಹಣೆ**

ಅನಂತರ 2 ಗಂಟೆ 5 ನಿಮಿಷಕ್ಕೆ ಹುಝೂರೆ ಅನ್ವರ್(ಅಬಿಅ) ಆಗಮಿಸಿ ಮಾನ್ಯ ಝಿಯಾಉಲ್ಲಾಹ್ ಸಾಹಿಬ್ ಅವರ ಪುತ್ರ ಅಝೀಝುಮ್ ಸರ್ಮದ್ ಅಹ್ಮದ್ ಆಫ್ ರೋಡಲ್ ಹಾಯಮ್ ಫ್ರೆಂಕ್‌ಫರ್ಟ್ ಅವರ ನಮಾಝ್ ಜನಾಝ ಉಪಸ್ಥಿತ ಹಾಗೂ ಮೂರು ದಿವಂಗತರ ನಮಾಝ ಜನಾಝ ಅನುಪಸ್ಥಿತ ನಿರ್ವಹಿಸಿಕೊಟ್ಟರು.

ಅಝೀಝುಮ್ ಸರ್‌ಮದ್ ಅಹ್ಮದ್ 24 ಆಗಸ್ಟ್ ಆಕಸ್ಮಿಕವಾಗಿ ನಿಧನಗೊಂಡರು. **ಇನ್ನ ಲಿಲ್ಲಾಹ್ ವ ಇನ್ನಾ ಇಲೈಹಿ ರಾಜಿಊನ್**. ನಿಧನದ ಸಮಯ ಅವರ ವಯಸ್ಸು 11 ವರ್ಷ ಆಗಿತ್ತು. ಮತ್ತು ಆರನೇ ತರಗತಿಯ ವಿದ್ಯಾರ್ಥಿಯಾಗಿದ್ದರು. ದಿವಂಗತರು ತನ್ನ ಪೋಷಕರಲ್ಲದೆ ಓರ್ವ ಸಹೋದರ ಮತ್ತು ಓರ್ವ ಸಹೋದರಿಯನ್ನು ಅಗಲಿ ಹೋಗಿದ್ದಾರೆ. ಅಝೀಝುಮ್ ಸರ್‌ಮದ್ ತನ್ನ 8 ವರ್ಷ ಅವಧಿಯಲ್ಲೇ ಪವಿತ್ರ ಖುರ್‌ಆನ್ ಸಂಪೂರ್ಣ ಓದಿದ್ದರು. ಖುರ್‌ಆನ್ ನ 9ನೇ ಭಾಗದವರೆಗೆ ಅನುವಾದ ಸಹಿತ ಓದಿದ್ದರು. ದಿವಂಗತರಿಗೆ ಪವಿತ್ರ ಖುರ್‌ಆನ್‌ನೊಂದಿಗೆ ಬಹಳ ಪ್ರೇಮವಿತ್ತು. ಹಿಂದಿನ ಎರಡು ರಂಝಾನ್‌ಯಿಂದ ಪವಿತ್ರ ಖುರ್‌ಆನ್‌ನ ಒಂದು ಸಂಪೂರ್ಣ ಓದು ಮುಗಿಸಿದ್ದರು. ಈಗ ಎರಡು ತಿಂಗಳಿಂದ ಆನ್‌ಲೈನ್ ಮೂಲಕ ಪವಿತ್ರ ಖುರ್‌ಆನ್‌ನ ತರ್ತೀಲ ಪಠಣ ಕಲಿಯುತ್ತಿದ್ದರು. ಪವಿತ್ರ ಖುರ್‌ಆನ್‌ನ 21 ಅಧ್ಯಾಯಗಳು ಮತ್ತು 22 ಹದೀಸುಗಳು ಕಂಠಸ್ತ ಮಾಡಿದ್ದರು. ಮತ್ತು ಇದರ ಅನುವಾದ ಸಹ ಕಲಿತಿದ್ದರು. 9 ದುಆಗಳು ಅನುವಾದ ಸಹಿತ ಕಂಠಪಾಠ ಮಾಡಿದ್ದರು. ದಿವಂಗತರಿಗೆ ಖಿಲಾಫತ್‌ನೊಂದಿಗೆ ತುಂಬಾ ಪ್ರೀತಿಯಿತ್ತು. ಜರ್ಮನಿ ಆಗಮಿಸಿದ ವೇಳೆ ಕವನ ಪ್ರಸ್ತುತಪಡಿಸುವವರಲ್ಲಿ ಸೇರಿದ್ದರು ಮತ್ತು ನಿಧನದ ಒಂದು ದಿವಸ ಮೊದಲು ಬೈತುಸ್ ಸುಬೂಹ್ ಮಸೀದಿಯಲ್ಲಿ ಕವನ ಸಿದ್ಧತೆಗಾಗಿ ಬಂದಿದ್ದರು.

**ನಮಾಝ್ ಜನಾಝ ಗ್ಹಾಯಿಬ್ (ಅನುಪಸ್ಥಿತಿ)**

(1) ಮುಕರ್ರಮ್ ಫಝಲ್ ಅಹ್ಮದ್ ಸಾಹಿಬ್ ತಂದೆ ಮುಕರ್ರಮ್ ನೂರ್ ಅಹ್ಮದ್ ಸಾಹಿಬ್ (ಅಲ್ತಾಫ್ ಪಾರ್ಕ್, ಅಮಾರತ್ ದೆಹಲಿ ಗೇಟ್ ಲಾಹೋರ್) 8 ಜೂನ್ 2023 ರಂದು 78 ನೇ ವಯಸ್ಸಿನಲ್ಲಿ ಅಲ್ಲಾಹನ ಅಣತಿಯಂತೆ ನಿಧನಗೊಂಡರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ಅತ್ಯಂತ ನಿಷ್ಠಾವಂತರು, ಸರಳ ಸ್ವಭಾವದವರು ಮತ್ತು ಜಮಾಅತ್‌ನೊಂದಿಗೆ ಘನಿಷ್ಠ ಸಂಬಂಧ ಹೊಂದಿದವರಾಗಿದ್ದರು. ಖಿಲಾಫತ್‌ನೊಂದಿಗೆ ಸಂಬಂಧಿತವಾಗಿರಲು ಉಪದೇಶಿಸುತ್ತಿದ್ದರು. ತನ್ನ ವಲಯದಲ್ಲಿ ರಿಶ್ತಾನಾತ ಕಾರ್ಯದರ್ಶಿಯಾಗಿಯೂ, ತಾಲೀಮ್ ಖುರ್‌ಆನ್ ಕಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು. ಯಾವಾಗಲೂ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು.

(2) ಮುಕರ್ರಮ್ ಮುಹಮ್ಮದ್ ರಿಯಾಝ್ ಸಾಹಿಬ್ ತಂದೆ ಮುಕರ್ರಮ್ ಸಾದಾ ಖಾನ್ ಸಹಿಬ್ (ಔರ್‌ಹಮಾಂ ಗ್ರಾಮ, ತ ಹಸೀಲ್ ಕೋಟ್‌ಮೋಮಿನ್, ಜಲ್ಲಾ ಸರ್‌ಗೋಧ)

25 ಮೇ 2023 ರಂದು 63 ವಯಸ್ಸಿನಲ್ಲಿ ಅಲ್ಲಾಹನ ಅಣತಿಯಂತೆ ನಿಧನಗೊಂಡರು. **ಇನ್ನಾ ಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್** ದಿವಂಗತರು ನಿಷ್ಠಾವಂತ ಅಹ್ಮದಿಯಾಗಿದ್ದರು. ಜಮಾಅತ್‌ನ ಮತ್ತು ಜಮಾಅತಿನ ಶಾಲಾ ನಿರ್ಮಾಣ ಕಾರ್ಯಲ್ಲಿ ತನ್ನ ಸ್ವಂತ ಕಾರ್ಯದಮತೆ ಶ್ರಮವಹಿಸಿದರು. ಜಮಾಅತಿನ ಕಾರ್ಯದ ವಿಷಯ ಎಂದರೆ ತನ್ನ ಎಲ್ಲಾ ಕಾರ್ಯಗಳನ್ನು ಬದಿಗೊತ್ತಿ ಹಾಜರಾಗುತ್ತಿದ್ದರು. ಬಾಜಮಾಅತ್ ನಮಾಝ್ ನಿರ್ವಹಣೆಯಲ್ಲಿ ಪ್ರಾಮಾಣಿಕರಾಗಿದ್ದರು. ತನ್ನ ಸಾಮರ್ಥ್ಯಕ್ಕನುಗುಣವಾಗಿ ಎಲ್ಲರಿಗೂ ಸಹಾಯ ನೀಡುತ್ತಿದ್ದರು ದಿವಂಗತರು ಮೂಸಿಯಾಗಿದ್ದರು.

(3) ಮುಕರ್ರಮ್ ಫರ್ಝಾನ್ ಮಕ್ಸೂದ್ ಸಾಹಿಬಾ ಪತ್ನಿ ಮುಕರ್ರಮ್ ಮಕ್ಸೂದ್ ಅಹ್ಮದ್ ಸಾಹಿಬ್ (ಗ್ರಾಮ ಗುಲಾಂ ಹೈದರ್ ಜಿಲ್ಲಾ ಉಮರ್ ಕೋಟ್) 13 ಮೇ 2023 ರಂದು 43 ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ನಮಾಝ್ ನಿರ್ವಹಣೆ, ಉಪವಾಸದಲ್ಲಿ ಪ್ರಾಮಾಣಿಕರಾಗಿದ್ದರು. ಅತಿಥಿ ಸತ್ಕಾರ ಮತ್ತು ಉತ್ತಮ ಚರಿತ್ರೆಯುಳ್ಳವರು, ಬಡಬಗ್ಗರ ಬಗ್ಗೆ ವಿಶೇಷ ಕಾಳಜಿವಹಿಸುವವರಾಗಿದ್ದರು. ಖಲೀಫ಼ರೊಂದಿಗೆ ಮತ್ತು ಜಮಾಅತ್‌ನೊಂದಿಗೆ ಪ್ರೇಮನಿಷ್ಠೆಯ ಸಂಬಂಧವಿತ್ತು. ದಿವಂಗತರು ಜಮಾಅತಿನ ಹುದ್ದೆದಾರರ ಮತ್ತು ಕೇಂದ್ರದ ಪ್ರತಿನಿಧಿಗಳನ್ನು ಗೌರವಪೂರ್ವಕವಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಓರ್ವ ಪುತ್ರ ಜಾಮಿಯ ಅಹ್ಮದಿಯಾದಲ್ಲಿ ಕಲಿಯುತ್ತಿದ್ದಾನೆ.

ನಮಾಝ್ ಜನಾಝಗಳ ನಿರ್ವಹಣೆಯ ನಂತರ ಹುಝೂರೆ ಅನ್ವರ್(ಅಬಿಅ) ಸಂಬಂಧಿಕರ ಸಾಂತ್ವನ ನೀಡಿದರು. ಅನಂತರ ಹುಝೂರೆ ಅನ್ವರ್(ಅಬಿಅ) ಮಸೀದಿಯಲ್ಲಿ ಆಗಮಿಸಿ ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಂತರ ತನ್ನ ವಸತಿಯತ್ತ ತೆರಳಿದರು.

ಈ ಹಿಂದೆಯೇ ಹುಝೂರೆ ಅನ್ವರ್(ಅಬಿಅ) ಕಚೇರಿ ಕಾರ್ಯಗಳಲ್ಲಿ ತೊಡಗಿದ್ದರು. ಕಾರ್ಯಕ್ರಮಗಳ ಅನ್ವಯ 6 ಗಂಟೆಗೆ ಹುಝೂರ್ ಅನ್ವರ್ ತಮ್ಮ ಕಚೇರಿಯಲ್ಲಿ ಆಗಮಿಸಿದರು ಮತ್ತು ಕೌಟುಂಬಿಕ ಭೇಟಿಗಳನ್ನು ಪ್ರಾರಂಭಿಸಿದರು.

**ಕೌಟುಂಬಿಕ ಭೇಟಿಗಳು**

ಇಂದು ಸಂಜೆಯ ಈ ಅಧಿವೇಶನದಲ್ಲಿ 40 ಕುಟುಂಬಗಳ 136 ಜನರು ತಮ್ಮ ಪ್ರೀತಿಯ ನೇತಾರರೊಡನೆ ಭೇಟಿ ಮಾಡುವ ಭಾಗ್ಯ ಪಡೆದರು. ಹುಝೂರೆ ಅನ್ವರ್(ಅಬಿಅ) ಪ್ರೀತಿಪೂರ್ವಕವಾಗಿ ಶಿಕ್ಷಣಾರ್ಥಿಗಳಿಗೆ ಲೇಖನಿಯನ್ನು ದಯಪಾಲಿಸಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಸಿಹಿಯನ್ನು ಹಂಚಿದರು.

ಇಂದು ಸಂಜೆಯ ಈ ಅಧಿವೇಶನದಲ್ಲಿ ಜರ್ಮನಿಯ ವಿವಿಧ ಜಮಾಅತುಗಳಿಂದ ಮತ್ತು ನಗರಗಳಿಂದ ಕುಟುಂಬಗಳು ಮತ್ತು ಜಮಾಅತ್ ಬಾಂಧವರು ಭೇಟಿಗಾಗಿ ತಲುಪಿದ್ದರು. ಕೆಲ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಬಹುದೂರದ ಪ್ರಯಾಣ ಬೆಳೆಸಿ ಇಲ್ಲಿ ಆಗಮಿಸಿದ್ದರು.

Ulm. Donau ಮತ್ತು Ebingen ಜಮಾಅತಿನಿಂದ ಬಂದವರು ಸುಮಾರು 300 ಕಿ.ಮೀ ಮತ್ತು ಜಮಾಅತ್ Hannover ಯಿಂದ ಬಂದವರು 337 ಕಿ.ಮೀ, Osnabrauck ಯಿಂದ ಬಂದವರು 343 ಕಿ.ಮೀ, Cheminitz ಯಿಂದ ಬಂದವರು 382 ಕಿ.ಮೀ, Jesteburg ಯಿಂದ ಬಂದವರು 462 ಕಿ.ಮೀ ನಷ್ಟು ಉದ್ದದ ಪ್ರಯಾಣ ಮಾಡಿ ಇಲ್ಲಿ ತಲುಪಿದ್ದರು.

ಭೇಟಿ ಮಾಡಲು ಬಂದವರಲ್ಲಿ ಬಹುತೇಕ ಕುಟುಂಬಗಳು ಪಾಕಿಸ್ತಾನದಿಂದ ಬಂದವರಾಗಿದ್ದರು ಮತ್ತು ತನ್ನ ಜೀವನದಲ್ಲಿ ಮೊದಲ ಬಾರಿಗೆ ತಮ್ಮ ಪ್ರೀತಿಯ ನೇತಾರರನ್ನು ಕಾಣಲು ಬಂದಿದ್ದರು.

ಅರ್ಸಲಾನ್ ಅಹ್ಮದ್ ಎಂಬ ಓರ್ವ ಯುವಕರು, ಅವರು ಸಿಮಾಲ್ಕೋಟಿನಿಂದ ಬಂದಿದ್ದರು, ಅವರು ಇಲ್ಲಿ Cheminitz ಜಮಾಅತ್‌ನ ಸದಸ್ಯರಾಗಿದ್ದರು, ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ನನ್ನ ಹೃದಯದ ಅವಸ್ಥೆಯ ಬಗ್ಗೆ ಕೇಳುವುದು ಬೇಡ, ಹೊರಗಿದ್ದಾಗ ತಾಳ್ಮೆಯಿರಲಿಲ್ಲ, ಏನೆಲ್ಲಾ ಯೋಚನೆ ಮಾಡಿಕೊಂಡಿದ್ದೆ. ಆದರೆ ಒಳಗೆ ಬರುತ್ತಲೇ ಮಾತು ಸಹ ಆಡಲಿಕ್ಕೆ ಬರಲಿಲ್ಲ. ಆದರೆ ಹೃದಯಕ್ಕೆ ಸಮಾಧಾನ ದೊರೆಯಿತು. ಅವರ ತಾಯಿಯು ಜೊತೆಗಿದ್ದರು. ಅವರು ಸಹ ಭಾವವಶರಾಗಿದ್ದರು ಮತ್ತು ಅವರ ನಯನಗಳು ಅಶುಭಂತಾಗಿದ್ದವು.

ಓರ್ವ ಮಿತ್ರರು ಸಿದ್ದೀಖ್ ಅಹ್ಮದ್ ಸಾಹಿಬ್ ಪೇಶಾವರ್‌ದಿಂದ ಆಗಮಿಸಿದ್ದರು. ಹಾಗೆ ನೋಡಿದರೆ ಅವರ ಸಂಬಂಧ ಆಫ್‌ಘಾನಿಸ್ತಾನದಿಂದ ಇತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಅವರ ಇದು ಮೊದಲನೆಯ ಭೇಟಿಯಾಗಿತ್ತು. ಇವರು ಸಹ ಭಾವವಶರಾಗಿದ್ದರು ಮತ್ತು ಮಾತನಾಡಲು ಆಗುತ್ತಿರಲಿಲ್ಲ. ಅವರು ತಿಳಿಸಿದರು. ಭೇಟಿಯಾದ ನಾವು ತುಂಬಾ ಪ್ರಾರ್ಥಿಸಿದೆವು. ಭೇಟಿ ಮಾಡಲು ಫೋನ್ ಬಂದಾಗ ತುಂಬಾ ಸಂತೋಷವಾಯಿತು.

ಬಹಾವಲ್‌ನಗರ ಪಾಕಿಸ್ತಾನದಿಂದ ಸಂಬಂಧ ಹೊಂದಿದ ಓರ್ವ ಮಿತ್ರರು ನವೀದ್ ಅಹ್ಮದ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ನನಗಂತೂ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ನನ್ನ ಜೊತೆ ಮಗಳು ಸಹ ಇದ್ದಳು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ

ವ್ಯವಹರಿಸಿದರು ಮತ್ತು ನನ್ನ ಪತ್ನಿಗೆ ಉಂಗುರ ದಯಪಾಲಿಸಿದರು.

ಮಿತ್ರರೊಬ್ಬರು ರಾನ ಖಾಲಿದ್ ಮೊಹಮೂದ್ ಸಾಹಿಬ್ ಕುಟುಂಬ ಸಹಿತ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲನೆಯ ಭೇಟಿಯಾಗಿತ್ತು. ಅವರು ಹೇಳಿದರು. ನನ್ನ ಪ್ರಾರ್ಥನೆಗಳು ಸ್ವೀಕಾರವಾದವು, ತುಂಬಾ ಸಂತೋಷವಾಯಿತು. ನನ್ನ ಜೀವನದ ಉದ್ದೇಶ ಇಂದು ಪೂರ್ತಿಯಾಯಿತು ಎಂಬ ಅನುಭವವಾಯಿತು. ಈ ಭೇಟಿ ಸಲುವಾಗಿ ಬಹಳಷ್ಟು ಪ್ರಾರ್ಥಿಸಿದ್ದೆ. ಭೇಟಿಯ ಸೂಚನೆ ಸಿಗುತ್ತಿದ್ದಂತೆ ಕೃತಜ್ಞತೆಗಾಗಿ ನಫಲ್ ನಮಾಝ್ ನಿರ್ವಹಿಸಿದೆ. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರಿತಿಯ ವ್ಯವಹಾರ ಮಾಡಿದರು. ಉಂಗುರಗಳನ್ನು ನೀಡಿದರು. ಪ್ರಸಾದ ನೀಡಿದರು, ನಾನು 23 ವರ್ಷಗಳಿಂದ ಕಾರ್ಯ ಮಾಡುತ್ತಿದ್ದೇನೆ, ದಿನಾಲೂ ತಹಜ್ಜುದ್ ನಮಾಝ್ ಇರ್ವಹಿಸಿ ಕೆಲಸಕ್ಕೆ ಹೊರಡುತ್ತೇನೆ, ಪ್ರತಿ ನಮಾಝ್‌ನಲ್ಲೂ ಮೊದಲು ಹುಝೂರೆ ಅನ್ವರ್(ಅಬಿಅ) ಅವರಿಗಾಗಿ ಪ್ರಾರ್ಥಿಸುತ್ತೇನೆ. ನಿಮಗೆ ಏನಾದರೂ ಬೇಕಾಗಿದ್ದಲ್ಲಿ ಅಲ್ಲಾಹರೊಡನೆ ಬೇಡಿರಿ, ಅವನ ಮುಂದೆಯೇ ತಲೆಬಾಗಿರಿ, ಅವನು ನಿಮ್ಮ ಬೇಡಿಕೆಗಳನ್ನೆಲ್ಲ ಈಡೇರಿಸುವನು, ಹೊರತು ಈ ಲೋಕದ ಎಲ್ಲಾ ವಸ್ತುಗಳು ಸಾಮಾನುಗಳು ನಶ್ವರವಾಗುವುವು.

ಇನ್ನೋರ್ವ ಮಿತ್ರರು ಇರ್ಫಾನುಲ್ಲ ಸಾಹಿಬ್‌ರವರಿದ್ದರೂ ಸಹ ಕುಟುಂಬ ಸಮೇತ ಇದು ಮೊದಲ ಭೇಟಿಯಾಗಿತ್ತು. ಅವರ ಸಂಬಂಧ ಪಾಕಿಸ್ತಾನದಲ್ಲಿ ಗುಜರಾತ್‌ನಿಂದಿತ್ತು. ಅವರು ಹೇಳಿದರು. ಭಾವನೆಗಳ ಬಗ್ಗೆ ಕೇಳುವುದೇ ಬೇಡ, ಹೃದಯವು ನೂರಕ್ಕಿಂತ ಹೆಚ್ಚು ವೇಗದಿಂದ ಬಡಿತಿತ್ತು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ವ್ಯವಹರಿಸಿದರು. ಮಕ್ಕಳಿಗೆ ಸಿಹಿಯನ್ನು ಕೊಟ್ಟರು, ನನಗೆ ಉಂಗುರ ನೀಡಿದರು. ತುಂಬಾ ಸಂತೋಷವಾಯಿತು.

ವಾಜಿದ್ ಅಹ್ಮದ್ ಸಾಹಿಬ್ ಅವರು ಬಸ್ತಿ ಶುಕ್ರಾನಿಗೆ ಸಂಬಂಧಿಸಿದವರಾಗಿದ್ದರು. ಜಿಲ್ಲಾ ಬಹಾವಲ್ಪೂರ್ ಆಗಿತ್ತು. ಇವರು 2018 ರಲ್ಲಿ ಜರ್ಮನಿಗೆ ಬಂದಿದ್ದರು. ಇಂದು ಅವರ ಮೊದಲ ಭೇಟಿಯಾಗಿತ್ತು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾರೆ. ಹುಝೂರ್ ಅನ್ವರ್ ಅವರ ಪ್ರಕಾಶಮಯ ಮುಖ ನೋಡಿ ನನಗೆ ಮಾತನಾಡಲು ಸಾಧ್ಯವಾಗಲಿಲ್ಲ, ಹುಝೂರರ ಪ್ರೀತಿ ನನ್ನ ಮತ್ತು ನನ್ನ ಕುಟುಂಬದ ಮೇಲೆ ಅಸಂಖ್ಯೆಯ ಅನುಗ್ರಹಗಳಿಗೆ ಕಾರಣವಾಗಿವೆ. ಪಾಕಿಸ್ತಾನದಲ್ಲಿ ಬಸ್ತಿ ಶುಕ್ರಾನಿಯ ಪರಿಸ್ಥಿತಿಗಳು ಬಹಳ ಹದಗೆಟ್ಟಿವೆ. ಜಮಾಅತನ್ನು ವಿರೋಧಿಸುವವರು ಹೆಚ್ಚಿದ್ದಾರೆ. ನಾನು ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡಾಗ ಹುಝೂರೆ ಅನ್ವರ್(ಅಬಿಅ) ಹೇಳಿದರು. ನಾನು ದುಆ ಮಾಡುವೆನು, ಅಲ್ಲಾಹನು ಅನುಗ್ರಹಸಿವನು. ಆಮೀನ್.

ಮುಹಮ್ಮದ್ ಅಕ್ರಮ್ ಸಾಹಿಬ್ ಎಂಬ ಮಿತ್ರರು, ಅವರು ಬಹಾವಲ್ಪೂರ್ ನಿಂದ ಬಂದಿದ್ದರು. ಹೇಳಿದರು. ಇಂದು ಹುಝೂರರ ಜೊತೆ ಇದು ನನ್ನ ಮೊದಲ ಭೇಟಿಯಾಗಿತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಭೇಟಿಯಾಗಿ ನಾನು ಮತ್ತೊಮ್ಮೆ ಈ ಜಗತ್ತಿಗೆ ಬಂದಿದ್ದೆನು ಎಂಬ ಭಾಸವಾಗುತ್ತದೆ. ಮನಸ್ಸಿಗೆ ಸಮಾಧಾನ ದೊರೆಯಿತು. ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡೆ. ಆಗ ಮನಸ್ಸಿಗೆ ತೃಪ್ತಿಯಾಯಿತು. ಜೇನು ಸಹ ಪ್ರಸಾದಿತಗೊಳಿಸಿದೆ.

ಇಹ್‌ಸಾನ್ ಅಹ್ಮದ್ ಸಾಹಿಬ್‌ರ ಸಂಬಂಧ ರಬ್ವಾದಿಂದಿದೆ. ಅವರದ್ದು ಸಹ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲ ಭೇಟಿಯಾಗಿತ್ತು. ಅವರು ಹೇಳುತ್ತಾರೆ. ನಾನು ತುಂಬಾ ಸಂತುಷ್ಟನಾಗಿದ್ದೇನೆ. ನಾನು ಮನಬಿಚ್ಚಿ ಮಾತನಾಡಿದ್ದೇನೆ. ಅವರ ಜೊತೆ ಅವರ 9 ವರ್ಷದ ಪುತ್ರ ಶಾಹ್‌ಝೇಬ್‌ನಿದ್ದನು. ಹೇಳಿದನು. ನನಗೆ ನಂಬಲು ಆಗುತ್ತಿರಲಿಲ್ಲ. ಒಂದು ಕನಸಿನಂತೆ ಕಾಣುತ್ತಿತ್ತು. ಪ್ರೀತಿಯ ಹುಝೂರೆ ಅನ್ವರ್(ಅಬಿಅ)ರು ನನ್ನ ಆಮೀನ್ ಮಾಡಿಸಿದರು ಮತ್ತು ನನಗೆ gifts ನೀಡಿದರು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಸಿದರು.

ಶಹಾವಲ್ ಬಿಲಾಲ್ ಎಂಬ ಓರ್ವ ಯುವಕರು ಅವರು ಪಿಂಡಿಭಾಗೋ ಸಿಯಾಲ್ಕೋಟ್‌ಗೆ ಸಂಬಂಧಿಸಿದವರಾಗಿದ್ದರು. ಅವರು ಒಂದೂವರೆ ವರ್ಷ ಮೊದಲು ಜರ್ಮನಿಗೆ ಬಂದಿದ್ದರು, ಅವರು ಹೇಳುತ್ತಾರೆ. ಪಾಕಿಸ್ತಾನದಲ್ಲಿ ಎಷ್ಟೋ ಅಹ್ಮದಿಯರು ಹುಝೂರೆ ಅನ್ವರ್(ಅಬಿಅ)ರ ಭೇಟಿಗಾಗಿ ಆತುರಪಡುವವರಾಗಿದ್ದಾರೆ. ನಾನು ತುಂಬಾ ಅದೃಷ್ಟವಂತನು. ನನಗೆ ಇಂದು ಈ ಅವಕಾಶ ದೊರೆತಿದೆ. ಪಾಕಿಸ್ತಾನದ ಪರಿಸ್ಥಿತಿಗಳ ಬಗ್ಗೆ ಪ್ರೀತಿಯ ಹುಝೂರರಿಗೆ ದುಆ ಮಾಡಲು ಹೇಳಿದೆ, ಹುಝೂರೆ ಅನ್ವರ್(ಅಬಿಅ) ಹೇಳಿದರು. ದುಆ ಮಾಡುವೆವು. ನಾನು ಉಂಗುರವನ್ನು ಪ್ರಸಾದಿತಗೊಳಿಸಿದೆ.

ಸಫೀರ್ ಅಹ್ಮದ್ ಸಾಹಿಬ್ 23 ವರ್ಷದ ಯುವಕರಾಗಿದ್ದಾರೆ, ಅವರು ಹೇಳುತ್ತಾರೆ. ನಾನು ಭೇಟಿಯಾಗುತ್ತಿದ್ದೆನು ಎಂಬುದಕ್ಕೆ ಭರವಸೆಯೇ ಮಾಡುತ್ತಿರಲಿಲ್ಲ, ಅಲ್ಲಾಹನ ಕೃಪೆಯಿಂದ ಈ ಅವಕಾಶ ದೊರೆತಿದೆ. ಹುಝೂರೆ ಅನ್ವರ್(ಅಬಿಅ) ಹೇಳಿದರು. ನೀವು ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದನ್ನು ಮುಂದುವರೆಸಿರಿ.

ನವೀದ್ ಅಹ್ಮದ್ ಸಾಹಿಬ್ ಗಂಡಸಿಂಗ್ ಜಿಲ್ಲಾ ಫೈಸಲಾಬಾದ್‌ಗೆ ಸಂಬಂಧಿಸಿದವರು. ಅವರು ಸಹ ಕುಟುಂಬ ಸಹಿತ ಮೊದಲ ಬಾರಿಗೆ ಭೇಟಿಗಾಗಿ ಬಂದಿರುತ್ತಾರೆ. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಅಲ್ಲಾಹನು ಹುಝೂರರ ಮುಖವನ್ನು ಪ್ರಕಾಶದಿಂದ ತುಂಬಿರುತ್ತಾನೆ. ನನಗೆ ನೋಡಲು ಕಣ್ಣು ಸಾಲುತ್ತಿರಲಿಲ್ಲ. ನನ್ನ ಮಗ ಎರಡು ವರ್ಷದ್ದಾಗುತ್ತ ಇದೆ. ಹುಝೂರೆ ಅನ್ವರ್(ಅಬಿಅ) ಪ್ರೀತಿಯಿಂದ ಅವನ ತಲೆಯ ಮೇಲೆ ಕೈಯನ್ನು ಸವರಿಸಿದರು. ಇವರುಗಳು ಭಾವವಶರಾಗಿದ್ದರು. ಆದ್ದರಿಂದ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಹೇಳಿದರು. ಈ ನನ್ನ ಮಗ ವಖ್ಫೆ ನೌನಲ್ಲಿದ್ದಾನೆ, ಈಗ ನಾನು ಮತ್ತು ನನ್ನ ಮಗ ಜಮಾಅತ್‌ಗಾಗಿ ಎಲ್ಲಾ ರೀತಿಯ ಸೇವೆ ಸಲ್ಲಿಸುತ್ತೇವೆ.

**(ಮುಂದುವರಿಯುವುದು)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"**

(ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**

(ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 04 July 2024, Issue No. 27

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)


# ಸೈಯಿದುನಾ ಹಝ್ರ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-26ರ ಉಳಿದ ಭಾಗ ಮುಂದುವರಿಸಲಾಗಿದೆ)*

**29 ಆಗಸ್ಟ್ 2023 ಮಂಗಳವಾರ**

ಹುಝೂರೆ ಅನ್ವರ್(ಅಬಿಅ) ಮುಂಜಾನೆ 5.40 ಕ್ಕೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಿಸಿದ ನಂತರ ಹುಝೂರೆ ಅನ್ವರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರೆ ಅನ್ವರ್(ಅಬಿಅ) ಕಚೇರಿಯ ಅಂಚೆ ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ಸೂಕ್ತ ನಿರ್ದೇಶನಗಳನ್ನು ನಿಡಿದರು. ಹೀಗೆ ಹುಝೂರ್ ನಾನಾ ರೀತಿಯ ಕಚೇರಿ ಕಾರ್ಯಗಳಲ್ಲಿ ಮಗ್ನರಾಗಿದ್ದರು.

**ಕೌಟುಂಬಿಕ ಭೇಟಿಗಳು**

ಕಾರ್ಯಕ್ರಮದನ್ವಯ ಮುಂಜಾನೆ 11 ಗಂಟೆಗೆ ಹುಝೂರೆ ಅನ್ವರ್(ಅಬಿಅ) ಕಚೇರಿಗೆ ಆಗಮಿಸಿದರು. ಮತ್ತು ಕೌಟುಂಬಿಕ ಭೇಟಿಗಳನ್ನು ಪ್ರಾರಂಭಿಸಿದರು. ಇಂದು ಮುಂಜಾನೆ ಈ ಅಧಿವೇಶನದಲ್ಲಿ 37 ಕುಟುಂಬಗಳ 148 ಜನರು ತನ್ನ ಪ್ರಿಯ ಹುಝೂರರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಪ್ರತಿಯೊಬ್ಬರು ಹುಝೂರರೊಡನೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರೆ ಅನ್ವರ್(ಅಬಿಅ) ಪ್ರೀತಿಪೂರ್ವಕವಾಗಿ ವಿದ್ಯೆ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಲೇಖನಿಯನ್ನು ಉಡುಗೊರೆಯಾಗಿ ನೀಡಿದರು ಮತ್ತು ಮಕ್ಕಳಲ್ಲಿ ಸಿಹಿಯನ್ನು ಹಂಚಿದರು.

ಜರ್ಮನಿಯ ವಿವಿಧ ಭಾಗಗಳಿಂದ ಈ ಕುಟುಂಬಗಳು ಭೇಟಿಯಾಗಲು ಬಂದಿದ್ದರು. ಕೆಲ ಕುಟುಂಬಗಳು ಬಹು ದೂರದ ಪ್ರಯಾಣ ಬೆಳೆಸಿ ತಮ್ಮ ಪ್ರಿಯ ನೇತಾರರ ಭೇಟಿಕ್ಕೋಸ್ಕರ ಆಗಮಿಸಿದ್ದರು. Trier ಜಮಾಅತ್‌ನಿಂದ ಬರುವವರು 208 ಕಿ.ಮೀ ದೂರ, Filderstadt ಯಿಂದ ಬರುವವರು 222 ಕಿ.ಮೀ, ಆಬನ್‌ನಿಂದ ಬರುವವರು 263 ಕಿ.ಮೀ Freibung ನಿಂದ ಬರುವವರು 280 ಕಿ.ಮೀ ಮತ್ತು Bocholt ಜಮಾಅತ್ ನಿಂದ ಬರುವವರು 302 ಕಿ.ಮೀ ದೂರ ಕ್ರಮಿಸಿ ಆಗಮಿಸಿದ್ದರು. Hannover ನಿಂದ ಬಂದ ಕುಟುಂಬಗಳು 337 ಕಿ.ಮೀ ಮತ್ತು Waldshut ನಿಂದ ಬಮದವರು 368 ಕಿ.ಮೀ ಮತ್ತು Chemnitz ಜಮಾಅತ್‌ನಿಂದ ಬಂದವರು 382 ಕಿ.ಮೀ ನ ದೂರ ಕ್ರಮಿಸಿ ತನ್ನ ಪ್ರಿಯ ಇಮಾಮರೊಂದಿಗೆ ಭೇಟಿಯ ಭಾಗ್ಯ ಪಡೆಯಲು ಆಗಮಿಸಿದ್ದರು.

ಈ ಕುಟುಂಬಗಳು ಬಹುತೇಕ ಕುಟುಂಬಗಳು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ತಮ್ಮ ಪ್ರಿಯ ಇಮಾಮರ ದರ್ಶನ ಭಾಗ್ಯ ಪಡೆಯಲು ಬಂದವರಾಗಿದ್ದರು. ಇಂದಿನ ದಿನ ಅವರ ಜೀವನದ ಅತ್ಯಂತ ಶುಭಕರ ದಿನ ಮತ್ತು ಅನುಗ್ರಹಿತ ದಿನವಾಗಿತ್ತು. ಪ್ರಿಯ ಇಮಾಮರ ಜೊತೆ ದರ್ಶನಗೈಯುವ ಈ ಕ್ಷಣಗಳು ಅವರು ಮತ್ತು ಅವರ ಮಕ್ಕಳು ಎಂದೂ ಮರೆಯಲಾರರು.

ಖಲೀಫತುಲ್ ಮಸೀಹ್‌ರೊಂದಿಗೆ ದರ್ಶನಗೈದ ಈ ಕೆಲ ಕ್ಷಣಗಳು ಅವರ ಇಡೀ ಜೀವನಕ್ಕಾಗಿ ಬಂಡವಾಳವಾಯಿತು. ಮನುಷ್ಯನ ಜೀವನದಲ್ಲಿ ಅವನ ಜಿವನವೇ ಬದಲಾಯಿಸುವವುತಹ ಕ್ಷಣಗಳು ಬರುತ್ತವೆ. ಖಲೀಫತುಲ್ ಮಸೀಹ್‌ರ ದರ್ಶನ ಈ ಕೆಲ ಕ್ಷಣಗಳು ನಿಶ್ಚಿತವಾಗಿಯೂ ಅಂತಹ ಶುಭದಾಯಕ ಕ್ಷಣಗಳೇ ಆಗಿವೆ. ಅದು ಮನುಷ್ಯನ ಐಹಿಕ ಪರ ಎರಡೂ ಲೋಕಗಳು ಸುಂದರಗೊಳ್ಳುತ್ತವೆ ಮತ್ತು ಅವರ ಜೀವನಕ್ಕೆ ಒಂದು ಹೊಸ ಆಯಾಮ ದೊರೆತಂತಾಗುತ್ತದೆ.

ಭೇಟಿಯಾಗುವವರಲ್ಲಿ ಕಾಷಿಫ್ ಸುಹೇಲ್ ಸಾಹಿಬ್ ಎಂಬ ಓರ್ವ ಮಿತ್ರರು (ಅವರು ರಬ್ವಾಕ್ಕೆ ಸಂಬಂಧಿಸಿದವರಾಗಿದ್ದರು) ತಮ್ಮ ಅನಿಸಿಕೆಗಳನ್ನು ಹೀಗೆ ವರ್ಣಿಸುತ್ತಾರೆ. ನಾನು ನನ್ನ ಅನುಭವವನ್ನು ಹೀಗೆ ವ್ಯಕ್ತಪಡಿಸಬೇಕು ಎಂಬುದಕ್ಕೆ ಪದಗಳೇ ದೊರೆಯುತ್ತಿಲ್ಲ. ನಾನು ನನ್ನ ವಶದಲ್ಲೇ ಇಲ್ಲ ಎಂಬ ಅನುಭವ ಆಗುತ್ತದೆ. ನನಗೆ ಬಾಯಿ ಬಿಡಲು ಆಗುತ್ತಿರಲಿಲ್ಲ. ಹುಝೂರ್ ತನ್ನ ಕಷ್ಟಗಳಿಗಾಗಿ ದುಆ ಮಾಡಿದರು. ಎಲ್ಲವೂ ಸರಿಯಾಗುವುದು ಎಂದು ಪ್ರಾರ್ಥಿಸುತ್ತಾ ಒಂದು ಉಂಗುರವನ್ನು ನನಗೆ ಪ್ರಸಾದರೂಪದಲ್ಲಿ ದಯಪಾಲಿಸಿದರು.

ರಬ್ವಾದಿಂದಲೇ ಆಗಮಿಸಿದ್ದ ಇನ್ನೊಬ್ಬ ಮಿತ್ರರು ಶೇಖ್ ಮುಹಮ್ಮದ್ ಇದ್ರೀಸ್ ಸಾಹಿಬ್, ಅವರು ಸಹ ಕುಟುಂಬಸಹಿತ ಹುಝೂರೆ ಅನ್ವರ್(ಅಬಿಅ) ಜೊತೆ ಮೊದಲ ಬಾರಿಗೆ ಭೇಟಿಯಾದರು, ಅವರು ಹೇಳುತ್ತಾರೆ: ನಾನು ನನ್ನ ಈ ಭೇಟಿಯನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ, ಪ್ರಕಾಶವೇ ಪ್ರಕಾಶವಿತ್ತು. ಹುಝೂರೆ ಅನ್ವರ್(ಅಬಿಅ) ಅವರ ಮುಖ ಎಷ್ಟೊಂದು ಪ್ರಖರ ಪ್ರಕಾಶಮಯವಾಗಿತ್ತೆಂದರೆ ಕಣ್ಣು ನಿಲ್ಲುತ್ತಿರಲಿಲ್ಲ. ನಾವು ದುಆ ಪಡೆದುಕೊಳ್ಳಲು ಬಂದವರಾಗಿದ್ದೆವು, ನನ್ನ ಶರೀರ ಈಗಲೂ ಕಂಪಿಸುತ್ತಿತ್ತು. ನಾವು ಇಡೀ ರಾತ್ರಿ ಹುಝೂರರ ಜೊತೆ ಭೇಟಿಯಾಗಲಿಕ್ಕಿದ್ದೇವೆ ಎಂಬ ವಿಚಾರದಿಂದಲೇ ಮಲಗರಾಗಲಿಲ್ಲ.

ಇನ್ನೋರ್ವ ಮಿತ್ರರು ಸಾಹಿಬ್ಝಾದ ನವೀದುರ್ ರಹ್ಮಾನ್ ಸಾಹಿಬ್ ಅವರ ಕೆಲ ತಿಂಗಳ ಹಿಂದೆ ಪೇಶಾವರದಿಂದ ಜರ್ಮನಿ ಬಂದಿದ್ದರು, ಹೇಳುತ್ತಾರೆ. ತಮ್ಮ ಪ್ರೀತಿಯ ನೇತಾರರ ಜೊತೆಯಲ್ಲಾದ ಈ ಭೇಟಿ ನಿಜವಾಗಿಯೂ ಒಂದು ಬಹುದೊಡ್ಡ ಸೌಭಾಗ್ಯವಾಗಿದೆ. ಇದಕ್ಕಾಗಿ ನಾನು ಅಲ್ಲಾಹನನ್ನು ಎಷ್ಟೋ ಸ್ತುತಿಸಿದರೂ ಕಡಿಮೆಯೇ ಸರಿ.

ಖುರ್ರಮ್ ನವೀದ್ ಎಂಬ ಮಿತ್ರರು ಅವರು Darmstadt ಜಮಾಅತ್‌ನಿಂದ ಬಂದಿದ್ದರು, ಹೇಳುತ್ತಾರೆ, 9 ವರ್ಷ ನಂತರ ನನಗೆ ಭೇಟಿಯ ಅವಕಾಶ ಸಿಗುತ್ತದೆ. ಭೇಟಿಯ ಮುಂಚಿತದಿಂದಲೇ ನನ್ನ ಭಾವನೆಗಳು ಉಮ್ಮಳಿಸುತ್ತಿದ್ದವು. ಈಗ ನನಗೆ ಏನನ್ನೂ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಈಗಲೂ ನನ್ನ ಹೃದಯಬಡಿತ ಹೆಚ್ಚಾಗಿದೆ, ಹುಝೂರ್ ನಮಗಾಗಿ ಬಹಳ ಸಮಯವನ್ನು ನೀಡಿದ್ದಾರೆ. ಈ ಭೇಟಿಯ ನನ್ನ ಜೀವನವೇ ಬದಲಾಯಿಸಬಲ್ಲದು. (ಇನ್‌ಶಾ ಅಲ್ಲಾಹ್).

ಬಶೀರ್ ಅಹ್ಮದ್ ಮಜೂಕ ಸಾಹಿಬ್ ಅವರ ಸಂಬಂಧ ಹವೇಲಿ ಮಜೂರ್ ಸರ್‌ಗೋಧದಿಂದಿದೆ, ತಮ್ಮ ಪತ್ನಿಯ ಜೊತೆ ಭೇಟಿ ಮಾಡಲು ಬಂದಿದ್ದರು, ಅವರು ಹೇಳುತ್ತಾರೆ: ಇದು ಹುಝೂರೆ ಅನ್ವರ್(ಅಬಿಅ)ರ ಜೊತೆ ನನ್ನ ಜೀವನದ ಮೊದಲನೆಯ ಭೇಟಿಯಾಗಿತ್ತು. ಇದು ನನಗೆ ಅತೀವ ಸಂತೋಷದ ದಿನವಾಗಿತ್ತು. ಅದನ್ನು ಪದಗಳಲ್ಲಿ ಹೇಳಲು ಸಾಧ್ಯವಿಲ್ಲ. ಅಲ್ಲಾಹನು ಪದೇ ಪದೇ ಈ ಭಾಗ್ಯ ದೊರೆಯುವಂತೆ ಮಾಡಲಿ ಎಂದು ಆಶಿಸುತ್ತೇನೆ.

ಬೋಹಿವಾಲಾ ಜಿಲ್ಲಾ ವಬಾಳಿ ಪಾಕಿತಾನಕ್ಕೆ ಸಂಬಂಧಿಸಿದವರು, ಓರ್ವ ಮಿತ್ರರು ಮುನವ್ವರ್ ಅಹ್ಮದ್ ಸಾಹಿಬ್ ಹೇಳುತ್ತಾರೆ. ಇದು ನನ್ನ ಮೊದಲನೆಯ ಭೇಟಿಯಾಗಿತ್ತು. ನನ್ನ ಭಾವನೆಗಳನ್ನು ವಿವರಿಸಲು ಸಾಧ್ಯವಿಲ್ಲ. ನನ್ನಲ್ಲಿ ಮಾತನಾಡಲು ಶಕ್ತಿಯಿಲ್ಲ, ನಾನು ಭಾವವಶನಾಗಿದ್ದೆ, ಇಂದು ನನಗೆ ಭೇಟಿ ಮಾಡಲು ದೊರೆತ ಈ ಅವಕಾಶ ಅಲ್ಲಾಹನ ಬಹುದೊಡ್ಡ ಅನುಗ್ರಹವಾಗಿದೆ.

ರಬ್ವಾದಿಂದ ಆಗಮಿಸಿದ್ದ ಮಿತ್ರರು ದೋಸ್ತ್ ಮುಖ್ತಾರ್ ಅಹ್ಮದ್ ಸಾಹಿಬ್ ಹೇಳುತ್ತಾರೆ. ಇದು ಹುಝೂರೆ ಅನ್ವರ್(ಅಬಿಅ)ರ ಜೊತೆ ನನ್ನ ಮೊದಲನೆಯ ಭೇಟಿಯಾಗಿತ್ತು. ಇದು ನನಗೆ ಸಂತೋಷದ ದಿನವಾಗಿತ್ತು. ಹುಝೂರರ ಜೊತೆ ಭೇಟಿ ಮಾಡಿ ಯಾವ ರೀತಿಯ ಸಂತೋಷವಾಗಿದೆ ಎಂದರೆ ಅದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಓರ್ವ ಯುವಕ ಇಹ್‌ತಿಶಾಮ್ ಮಕ್ಸೂದ್ ಸಾಹಿಬ್ ಅವರು 18 ವರ್ಷ ವಯಸ್ಸಿನವರಾಗಿದ್ದರು.

*(ಪುಟ ಸಂಖ್ಯೆ-10ರಲ್ಲಿ ಮುಂದುವರಿಸಲಾಗಿದೆ)*


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.